# ಭಾರತದ ಪುನರ್ವಸತಿ ಪರಿಷತ್ತು ಅಧಿನಿಯಮ, 1992

06.10.2006ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 34ನೇ ಸಂಪುಟದ 1ನೇ ಸಂಚಿಕೆಯಲ್ಲಿ 99 ರಿಂದ 113ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**


## ಅಧ್ಯಾಯ – I

### ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು

## ಅಧ್ಯಾಯ – II

### ಭಾರತದ ಪುನರ್ವಸತಿ ಪರಿಷತ್ತು

3. ಭಾರತದ ಪುನರ್ವಸತಿ ಪರಿಷತ್ತಿನ ರಚನೆ ಮತ್ತು ನಿಗಮನ
4. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ
5. ಅನರ್ಹತೆಗಳು
6. ಸದಸ್ಯರು ಪದವನ್ನು ತೆರವು ಮಾಡುವುದು
7. ಕಾರ್ಯನಿರ್ವಾಹಕ ಸಮಿತಿ ಮತ್ತು ಇತರ ಸಮಿತಿಗಳು
8. ಪರಿಷತ್ತಿನ ಸದಸ್ಯ ಕಾರ್ಯದರ್ಶಿ ಮತ್ತು ನೌಕರರು
9. ಪರಿಷತ್ತಿನಲ್ಲಿನ ಖಾಲಿಸ್ಥಾನಗಳು, ಕಾರ್ಯ, ಇತ್ಯಾದಿಗಳನ್ನು ಅಸಿಂಧುಗೊಳಿಸದಿರುವುದು
10. ಪುನರ್ವಸತಿ ಪರಿಷತ್ತಿನ ವಿಸರ್ಜನೆ ಮತ್ತು ಪುನರ್ವಸತಿ ಪರಿಷತ್ತಿನ ಹಕ್ಕುಗಳು, ಹೊಣೆಗಾರಿಕೆಗಳು ಹಾಗೂ ನೌಕರರನ್ನು ಪರಿಷತ್ತಿಗೆ ವರ್ಗಾಯಿಸುವುದು

## ಅಧ್ಯಾಯ – III

### ಪರಿಷತ್ತಿನ ಪ್ರಕಾರ್ಯಗಳು

11. ಪುನರ್ವಸತಿ ವೃತ್ತಿ ಪರಿಣಿತರಿಗೆ ಭಾರತದಲ್ಲಿನ ವಿಶ್ವವಿದ್ಯಾನಿಲಯ ಮುಂತಾದವು ನೀಡಿರುವ ವಿದ್ಯಾರ್ಹತೆಗಳ ಮನ್ನಣೆ
12. ಭಾರತದ ಹೊರಗಿನ ಶಿಕ್ಷಣ ಸಂಸ್ಥೆಗಳು ನೀಡಿರುವ ವಿದ್ಯಾರ್ಹತೆಗಳ ಮನ್ನಣೆ
13. ಅನುಸೂಚಿಯಲ್ಲಿ ಸೇರಿಸಿರುವ ವಿದ್ಯಾರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳು ರಿಜಿಸ್ಟರಿನಲ್ಲಿ ತಮ್ಮ ಹೆಸರುಗಳನ್ನು ಸೇರಿಸಲು ಹಕ್ಕುಗಳು
14. ವ್ಯಾಸಂಗ ಪಠ್ಯಕ್ರಮ ಮತ್ತು ಪರೀಕ್ಷೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಅಗತ್ಯಪಡಿಸಲು ಅಧಿಕಾರ
15. ಪರೀಕ್ಷೆಗಳ ಪರಿಶೀಲಕರು
16. ಪರೀಕ್ಷೆಗಳ ಸಂದರ್ಶಕರು
17. ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು
18. ಶಿಕ್ಷಣದ ಕನಿಷ್ಠ ಗುಣಮಟ್ಟಗಳು

19. ರಿಜಿಸ್ಟರಿನಲ್ಲಿ ನೋಂದಣಿ

20. ರಿಜಿಸ್ಟರಿನಲ್ಲಿ ನೋಂದಾಯಿತರಾದ ವ್ಯಕ್ತಿಗಳ ವಿಶೇಷಾಧಿಕಾರಗಳು

21. ವೃತ್ತಿ ನಡತೆಯನ್ನು ನಿಯಮಿಸುವುದು ಮತ್ತು ರಿಜಿಸ್ಟರಿನಿಂದ ಹೆಸರು ತೆಗೆದುಹಾಕುವುದು

22. ರಿಜಿಸ್ಟರಿನಿಂದ ಹೆಸರನ್ನು ತೆಗೆದುಹಾಕಿದ ಆದೇಶದ ವಿರುದ್ಧ ಅಪೀಲು

23. ರಿಜಿಸ್ಟರು

24. ಪರಿಷತ್ತು ಒದಗಿಸಬೇಕಾದ ಮಾಹಿತಿ ಮತ್ತು ಅದರ ಪ್ರಕಟಣೆ

25. ಅಪರಾಧಗಳ ಸಂಜ್ಞಾನ

26. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ

27. ಪರಿಷತ್ತಿನ ನೌಕರನು ಲೋಕನೌಕರನಾಗಿರುವುದು

28. ನಿಯಮ ರಚನಾಧಿಕಾರ

29. ವಿನಿಯಮಗಳ ರಚನಾಧಿಕಾರ

30. ನಿಯಮ ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು

**ಅನುಸೂಚಿ**

## ಭಾರತದ ಪುನರ್ವಸತಿ ಪರಿಷತ್ತು ಅಧಿನಿಯಮ, 1992

(ಅಧಿನಿಯಮ ಸಂಖ್ಯೆ 1992ರ 34)

[1ನೇ ಸೆಪ್ಟೆಂಬರ್, 1992]

ಪುನರ್ವಸತಿ ವೃತ್ತಿ ಪರಿಣತರ ಮತ್ತು ಸಿಬ್ಬಂದಿಯ ತರಬೇತಿಯನ್ನು ವಿನಿಯಮಿಸಲು ಮತ್ತು ಮೇಲ್ವಿಚಾರಣೆ ಮಾಡಲು, ಪುನರ್ವಸತಿ ಮತ್ತು ವಿಶೇಷ ಶಿಕ್ಷಣದಲ್ಲಿ ಸಂಶೋಧನೆಯನ್ನು ವೃದ್ಧಿಗೊಳಿಸಲು, ಕೇಂದ್ರ ಪುನರ್ವಸತಿ ರಿಜಿಸ್ಟರನ್ನು ನಿರ್ವಹಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಭಾರತದ ಪುನರ್ವಸತಿ ಪರಿಷತ್ತನ್ನು ರಚಿಸಲು ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಭಾರತ ಗಣರಾಜ್ಯದ ನಲವತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತ ವಾಗತಕ್ಕದ್ದು.

### ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಭಾರತದ ಪುನರ್ವಸತಿ ಅಧಿನಿಯಮ, 1992 ಎಂದು ಕರೆಯತಕ್ಕದ್ದು.

(2) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು* ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**– (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧ್ಯಕ್ಷ" ಎಂದರೆ, 3ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪರಿಷತ್ತಿನ ಅಧ್ಯಕ್ಷ;

(ಬಿ) "ಪರಿಷತ್ತು" ಎಂದರೆ, 3ನೇ ಪ್ರಕರಣದ ಮೇರೆಗೆ ರಚಿಸಲಾದ ಭಾರತದ ಪುನರ್ವಸತಿ ಪರಿಷತ್ತು;

(ಸಿ) "ಅಂಗವಿಕಲ" ಎಂದರೆ, ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 (1996 ರ 1) ರ 2 ನೇ ಪ್ರಕರಣದ (ಐ) ಖಂಡದಲ್ಲಿ ಉಲ್ಲೇಖಿಸಿರುವ ಯಾವುದೇ ಅಂಗವಿಕಲತೆಯಿಂದ ನರಳುತ್ತಿರುವ ಒಬ್ಬ ವ್ಯಕ್ತಿ;

(ಡಿ) * * * (ಬಿಟ್ಟುಬಿಡಲಾಗಿದೆ)

(ಇ) * * * (ಬಿಟ್ಟುಬಿಡಲಾಗಿದೆ)

(ಎಫ್) "ಸದಸ್ಯ" ಎಂದರೆ, 3ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಸದಸ್ಯ ಮತ್ತು ಇದರಲ್ಲಿ ಅಧ್ಯಕ್ಷನು ಒಳಗೊಳ್ಳುತ್ತಾನೆ;

(ಜಿ) "ಸದಸ್ಯ ಕಾರ್ಯದರ್ಶಿ" ಎಂದರೆ, 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಸದಸ್ಯ ಕಾರ್ಯದರ್ಶಿ;

(ಹೆಚ್) "ಬುದ್ಧಿಮಾಂದ್ಯತೆ" ಎಂದರೆ, ಸಾಧಾರಣ ಮಟ್ಟಕ್ಕಿಂತ ಕಡಿಮೆ ಬುದ್ಧಿಶಕ್ತಿಯ ಲಕ್ಷಣ ಹೊಂದಿರುವ, ಒಬ್ಬ ವ್ಯಕ್ತಿಯ ಮನಸ್ಸಿನ ಕುಂಠಿತ ಬೆಳವಣಿಗೆಯ ಅಥವಾ ಅಪೂರ್ಣ ಬೆಳವಣಿಗೆ ಸ್ಥಿತಿ;

(ಐ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಲಾದ ಒಂದು ಅಧಿಸೂಚನೆ;

(ಜೆ) "ನಿಯಮಿಸಲಾದುದು" ಎಂದರೆ, ವಿನಿಯಮಗಳ ಮೂಲಕ ನಿಯಮಿಸಲಾದುದು;

*31.07.1993 ರಿಂದ ಜಾರಿಗೆ ಬಂದಿದೆ. ದಿನಾಂಕ 28.04.1993ರ ಎಸ್.ಓ. 288 (ಈ)

(ಕೆ) "ಮನ್ನಣೆ ಪಡೆದ ಪುನರ್ವಸತಿ ಅರ್ಹತೆಗಳು" ಎಂದರೆ, ಅನುಸೂಚಿಯಲ್ಲಿ ಸೇರಿರುವ ಯಾವುದೇ ಅರ್ಹತೆ;

(ಎಲ್) "ರಿಜಿಸ್ಟರ್" ಎಂದರೆ, 23ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿರ್ವಹಿಸಿಕೊಂಡು ಬರಲಾದ ಕೇಂದ್ರ ಪುನರ್ವಸತಿ ರಿಜಿಸ್ಟರ್;

(ಎಂ) "ವಿನಿಯಮಗಳು"ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳು;

(ಎಂಎ) "ಪುನರ್ವಸತಿ" ಇದು ಅಂಗವಿಕಲ ವ್ಯಕ್ತಿಗಳು ಅವರ ದೈಹಿಕ, ಸಂವೇದನಾತ್ಮಕ, ಬೌದ್ಧಿಕ, ಮಾನಸಿಕ ಅಥವಾ ಸಾಮಾಜಿಕ ಕಾರ್ಯದ ಮಟ್ಟಗಳನ್ನು ಮುಟ್ಟಲು ಮತ್ತು ಅವುಗಳನ್ನು ನಿರ್ವಹಿಸಿಕೊಂಡು ಬರಲು ಅವರನ್ನು ಸಮರ್ಥಗೊಳಿಸುವ ಉದ್ದೇಶಿಸಿದ ಪ್ರಕ್ರಿಯೆಗೆ ಸಂಬಂಧಪಡುತ್ತದೆ ;

(ಎನ್) "ಪುನರ್ವಸತಿ ವೃತ್ತಿ ಪರಿಣತರು" ಎಂದರೆ,–

(i) ಶ್ರವಣ ಶಾಸ್ತ್ರಜ್ಞರು ಮತ್ತು ವಾಕ್ ಚಿಕಿತ್ಸಕರು;

(ii) ಚಿಕಿತ್ಸಾಲಯ ಮನಃಶಾಸ್ತ್ರಜ್ಞ ;

(iii) ಶ್ರವಣ ಸಾಧನ ಮತ್ತು ಕಿವಿಯಚ್ಚು ತಂತ್ರಜ್ಞರು;

(iv) ಪುನರ್ವಸತಿ ಇಂಜಿನಿಯರುಗಳು ಮತ್ತು ತಂತ್ರಜ್ಞರು ;

(v) ಅಂಗವಿಕಲರಿಗೆ ಶಿಕ್ಷಣ ಮತ್ತು ತರಬೇತಿ ನೀಡುವ ವಿಶೇಷ ಶಿಕ್ಷಕರು ;

(vi) ಅಂಗವಿಕಲರೊಂದಿಗೆ ವ್ಯವಹರಿಸುವ ವೃತ್ತಿ ಸಲಹೆಗಾರರು, ಉದ್ಯೋಗಾಧಿಕಾರಿಗಳು ಮತ್ತು ನಿಯೋಜನ ನಿರ್ದೇಶನಾಧಿಕಾರಿಗಳು;

(vii) ವಿವಿಧೋದ್ದೇಶ ಪುನರ್ವಸತಿ ಚಿಕಿತ್ಸಕರು, ತಂತ್ರಜ್ಞರು; ಅಥವಾ

(viii) ಕೇಂದ್ರ ಸರ್ಕಾರವು ಪರಿಷತ್ತಿನೊಡನೆ ಸಮಾಲೋಚಿಸಿ ಕಾಲಕಾಲಕ್ಕೆ ಅಧಿಸೂಚಿಸ ಬಹುದಾದಂಥ ಇತರೆ ಪ್ರವರ್ಗಗಳ ವೃತ್ತಿ ಪರಿಣತರು;

(ಒ) * * *

(1ಎ) ಈ ಅಧಿನಿಯಮದಲ್ಲಿ ಬಳಸಿದ್ದು, ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು, ಅಂಗವಿಕಲ ವ್ಯಕ್ತಿಗಳ (ಸಮಾನಾವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 (1996ರ 1) ರಲ್ಲಿ ಪರಿಭಾಷಿಸಿ ಅವುಗಳಿಗೆ ಆ ಅಧಿನಿಯಮದಲ್ಲಿ ಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

(2) ಯಾವ ಪ್ರದೇಶದಲ್ಲಿ ಒಂದು ಅಧಿನಿಯಮಿತಿ ಅಥವಾ ಅದರ ಉಪಬಂಧವು ಜಾರಿಯಲ್ಲಿರುವುದಿಲ್ಲವೋ ಆ ಪ್ರದೇಶಕ್ಕೆ ಸಂಬಂಧಿಸಿದಂತೆ, ಅಂಥ ಅಧಿನಿಯಮಿತಿ ಅಥವಾ ಅದರ ಯಾವುದೇ ಉಪಬಂಧಕ್ಕೆ ಈ ಅಧಿನಿಯಮದಲ್ಲಿನ ಯಾವುದೇ ಉಲ್ಲೇಖವನ್ನು, ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನಿಗೆ ಅಥವಾ ಸಂವಾದಿ ಕಾನೂನಿನ ಸುಸಂಗತ ಉಪಬಂಧಕ್ಕೆ ಮಾಡಿರುವ ಉಲ್ಲೇಖವೆಂದು ಅರ್ಥೈಸತಕ್ಕದ್ದು.

## ಅಧ್ಯಾಯ – II

## ಭಾರತದ ಪುನರ್ವಸತಿ ಪರಿಷತ್ತು

**3. ಭಾರತದ ಪುನರ್ವಸತಿ ಪರಿಷತ್ತಿನ ರಚನೆ ಮತ್ತು ನಿಗಮನ.**– (1) ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಭಾರತದ ಪುನರ್ವಸತಿ ಪರಿಷತ್ತು ಎಂದು ಕರೆಯಲಾಗುವ ಒಂದು ಪರಿಷತ್ತನ್ನು ರಚಿಸತಕ್ಕದ್ದು.

(2) ಪರಿಷತ್ತು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಪೂರ್ವೋಕ್ತ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಚರ ಮತ್ತು ಸ್ಥಿರ ಸ್ವತ್ತನ್ನು ಆರ್ಜನೆ ಮಾಡಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಹಾಗೂ ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದು ಸದರಿ ಹೆಸರಿನಲ್ಲಿ ದಾವೆಯನ್ನು ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಪರಿಷತ್ತು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಪುನರ್ವಸತಿ, ಅಂಗವಿಕಲತೆ ಮತ್ತು ವಿಶೇಷ ಶಿಕ್ಷಣ ಕ್ಷೇತ್ರದಲ್ಲಿ ವೃತ್ತಿ ಪರಿಣಿತ ಅರ್ಹತೆಯೊಂದಿಗೆ ಆಡಳಿತದಲ್ಲಿ ಅನುಭವ ಹೊಂದಿರುವ ವ್ಯಕ್ತಿಗಳ ಪೈಕಿಯಿಂದ ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಒಬ್ಬ ಅಧ್ಯಕ್ಷ;

(ಬಿ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಪಟ್ಟ ವಿಷಯಗಳೊಂದಿಗೆ ವ್ಯವಹರಿಸುವ ಕೇಂದ್ರ ಸರ್ಕಾರದ ಮಂತ್ರಾಲಯವನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬಹುದಾದಂಥ ಏಳನ್ನು ಮೀರದಷ್ಟು ಸಂಖ್ಯೆಯ ಸದಸ್ಯರು;

(ಸಿ) ವಿಶ್ವವಿದ್ಯಾಲಯ ಅನುದಾನಗಳ ಆಯೋಗವನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಒಬ್ಬ ಸದಸ್ಯ;

(ಡಿ) ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ ಮಹಾನಿರ್ದೇಶನಾಲಯವನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಒಬ್ಬ ಸದಸ್ಯ;

(ಇ) ಅಕ್ಷರಾನುಕ್ರಮವಾಗಿ ಸರದಿಯಂತೆ ಸಮಾಜ ಕಲ್ಯಾಣ ವಿಷಯದೊಂದಿಗೆ ವ್ಯವಹರಿಸುವ ರಾಜ್ಯಗಳ ಅಥವಾ ಒಕ್ಕೂಟ ರಾಜ್ಯಕ್ಷೇತ್ರಗಳ ಮಂತ್ರಾಲಯ ಅಥವಾ ಇಲಾಖೆಯನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು, ನೇಮಕ ಮಾಡಬೇಕಾದ ಇಬ್ಬರು ಸದಸ್ಯರು;

(ಎಫ್) ಸ್ವಯಂಸೇವಾ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಪುನರ್ವಸತಿ ವೃತ್ತಿ ಪರಿಣಿತರ ಪೈಕಿ ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ಆರು ಸದಸ್ಯರನ್ನು ಮೀರದಷ್ಟು ಸಂಖ್ಯೆಯ ಸದಸ್ಯರು;

(ಜಿ) ಭಾರತದ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956ರ 102)ರ ಮೇರೆಗೆ ನೋಂದಣಿಯಾದ ಮತ್ತು ಅಂಗವಿಕಲರ ಪುನರ್ವಸತಿ ಕೆಲಸದಲ್ಲಿ ನಿರತರಾಗಿರುವ ವೈದ್ಯಕೀಯ ವೃತ್ತಿ ಪರಿಣಿತರ ಪೈಕಿ ಕೇಂದ್ರ ಸರ್ಕಾರವು, ನೇಮಕ ಮಾಡಬಹುದಾದ ನಾಲ್ವರು ಸದಸ್ಯರನ್ನು ಮೀರದಷ್ಟು ಸಂಖ್ಯೆಯ ಸದಸ್ಯರು;

(ಹೆಚ್) ಮೂವರು ಸಂಸತ್ತಿನ ಸದಸ್ಯರು, ಅವರಲ್ಲಿ ಇಬ್ಬರನ್ನು ಲೋಕಸಭೆಯಿಂದಲೂ ಮತ್ತು ಒಬ್ಬರನ್ನು ರಾಜ್ಯಸಭೆಯಿಂದಲೂ ಚುನಾಯಿಸತಕ್ಕದ್ದು;

(ಐ) ಅಂಗವಿಕಲ ವ್ಯಕ್ತಿಗಳಿಗೆ ನೆರವಾಗುವಲ್ಲಿ ಸಕ್ರಿಯವಾಗಿ ನಿರತರಾಗಿರುವ ಸಮಾಜ ಕಾರ್ಯಕರ್ತರ ಪೈಕಿ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬಹುದಾದ ಮೂವರು ಸದಸ್ಯರನ್ನು ಮೀರದಷ್ಟು ಸಂಖ್ಯೆಯ ಸದಸ್ಯರು;

(ಜೆ) ಸದಸ್ಯ ಕಾರ್ಯದರ್ಶಿ, ಪದನಿಮಿತ್ತ.

(4) ಮಂಡಲಿಯ ಸದಸ್ಯ ಪದವು, ಅದರ ಧಾರಕನನ್ನು ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ ಆಯ್ಕೆಯಾಗುವುದನ್ನು ಅಥವಾ ಆಯ್ಕೆಯಾಗಿರುವುದನ್ನು ಅನರ್ಹಗೊಳಿಸತಕ್ಕದ್ದಲ್ಲ.

**4. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ.**- (1) ಅಧ್ಯಕ್ಷ ಅಥವಾ ಸದಸ್ಯನು, ಅವನ ನೇಮಕಾತಿಯ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಅಥವಾ ಅವನ ಉತ್ತರಾಧಿಕಾರಿಯು ವಿಧ್ಯುಕ್ತವಾಗಿ ನೇಮಕಗೊಳ್ಳುವವರೆಗೆ - ಇದರಲ್ಲಿ ಯಾವುದು ಹೆಚ್ಚು ಅವಧಿಯೋ ಅಲ್ಲಿಯವರೆಗೆ ಪದವನ್ನು ಧಾರಣ ಮಾಡತಕ್ಕದ್ದು ;

(2) ಪರಿಷತ್ತಿನಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನವನ್ನು 3ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ತುಂಬತಕ್ಕದ್ದು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು, ಯಾವ ಸದಸ್ಯನ ಸ್ಥಾನದಲ್ಲಿ ಅವನನ್ನು ನೇಮಕ ಮಾಡಲಾಗಿದೆಯೋ ಆ ಸದಸ್ಯನು ಧಾರಣ ಮಾಡಿದ್ದ ಪದದ ಉಳಿದ ಅವಧಿಯವರೆಗೆ ಮಾತ್ರ ಆ ಪದವನ್ನು ಧಾರಣ ಮಾಡತಕ್ಕದ್ದು ;

(3) ಪರಿಷತ್ತು ಗೊತ್ತುಪಡಿಸಬಹುದಾದಂಥ ಕಾಲ ಮತ್ತು ಸ್ಥಳಗಳಲ್ಲಿ ಪ್ರತಿ ವರ್ಷ ಕನಿಷ್ಠ ಒಂದು ಬಾರಿಯಾದರೂ ಪರಿಷತ್ತಿನ ಸಭೆಸೇರತಕ್ಕದ್ದು ಮತ್ತು ಸಭೆಯಲ್ಲಿಯ ವ್ಯವಹಾರವನ್ನು ನಡೆಸುವಲ್ಲಿ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು ;

(4) ಪರಿಷತ್ತಿನ ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷನು, ಅಥವಾ ಯಾವುದೇ ಕಾರಣದಿಂದಾಗಿ ಪರಿಷತ್ತಿನ ಸಭೆಗೆ ಹಾಜರಾಗಲು ಅವನಿಗೆ ಸಾಧ್ಯವಾಗದಿದ್ದರೆ, ಸಭೆಯಲ್ಲಿ ಹಾಜರಿರುವ ಸದಸ್ಯರ ಪೈಕಿಯಿಂದ ಚುನಾಯಿತನಾದ ಇತರ ಯಾರೇ ಸದಸ್ಯನು ವಹಿಸತಕ್ಕದ್ದು ;

(5) ಪರಿಷತ್ತಿನ ಯಾವುದೇ ಸಭೆಯ ಮುಂದೆ ಬರುವಂಥ ಎಲ್ಲ ಪ್ರಶ್ನೆಗಳನ್ನು ಸಭೆಯಲ್ಲಿ ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಮತಗಳು ಸಮನಾಗಿ ಬಂದಿದ್ದ ಸಂದರ್ಭದಲ್ಲಿ, ಅಧ್ಯಕ್ಷ ಅಥವಾ ಅವನ ಗೈರುಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**5. ಅನರ್ಹತೆಗಳು.**- ಯಾರೇ ವ್ಯಕ್ತಿಯು,-

(ಎ) ಅಸ್ವಸ್ಥಚಿತ್ತನಾಗಿದ್ದರೆ ಅಥವಾ ಆಗುವಂತಿದ್ದರೆ ಅಥವಾ ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿತನಾಗಿದ್ದರೆ; ಅಥವಾ

(ಬಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧಃಪತನವನ್ನು ಒಳಗೊಳ್ಳುವ ಯಾವುದೇ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದರೆ ಅಥವಾ ನಿರ್ಣೀತನಾಗಿದ್ದರೆ; ಅಥವಾ

(ಸಿ) ದಿವಾಳಿಯೆಂದು ಅಥವಾ ಯಾವುದೇ ಕಾಲದಲ್ಲಿ ದಿವಾಳಿಯಾಗಿದ್ದನೆಂದು ನ್ಯಾಯನಿರ್ಣೀತನಾಗಿದ್ದರೆ

- ಸದಸ್ಯನಾಗಿರತಕ್ಕದ್ದಲ್ಲ.

**6. ಸದಸ್ಯರು ಪದವನ್ನು ತೆರವು ಮಾಡುವುದು.**- ಒಬ್ಬ ಸದಸ್ಯನು,

(ಎ) 5ನೇ ಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಅನರ್ಹತೆಗೆ ಒಳಪಟ್ಟರೆ; ಅಥವಾ

(ಬಿ) ಸಭೆಗಳಿಗೆ ಪರಿಷತ್ತಿನ ಅಭಿಪ್ರಾಯದಲ್ಲಿ ಸಾಕೆನಿಸುವಷ್ಟು ಅದರ ಮೂರು ನಿರಂತರ ಸಭೆಗಳಿಗೆ ಅನುಮತಿ ಪಡೆಯದೇ ಗೈರುಹಾಜರಾದರೆ; ಅಥವಾ

(ಸಿ) 3ನೇ ಪ್ರಕರಣದ (3)ನೇ ಉಪಪ್ರಕರಣದ (ಜಿ) ಖಂಡದಲ್ಲಿ ಉಲ್ಲೇಖಿಸಿರುವ ಸದಸ್ಯನ ಸಂದರ್ಭದಲ್ಲಿ ಭಾರತೀಯ ವೈದ್ಯಕೀಯ ರಿಜಿಸ್ಟರಿನಲ್ಲಿ ಅವನ ಹೆಸರು ಪಟ್ಟಿಯಲ್ಲಿ ಸೇರಿರುವುದು ನಿಂತುಹೋದರೆ

- ಆ ತರುವಾಯ ಅವನ ಸ್ಥಾನವು ತೆರವಾಗತಕ್ಕದ್ದು.

**7. ಕಾರ್ಯನಿರ್ವಾಹಕ ಸಮಿತಿ ಮತ್ತು ಇತರ ಸಮಿತಿಗಳು.**- (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು, ಪರಿಷತ್ತು ಅವಶ್ಯವೆಂದು ಭಾವಿಸುವಂಥ ಸಾಮಾನ್ಯ ಅಥವಾ ವಿಶೇಷ ಉದ್ದೇಶಗಳಿಗಾಗಿ ಅದು ತನ್ನ ಸದಸ್ಯರ ಪೈಕಿಯಿಂದ ಒಂದು ಕಾರ್ಯನಿರ್ವಾಹಕ ಸಮಿತಿಯನ್ನು ಮತ್ತು ಇತರ ಸಮಿತಿಗಳನ್ನು ರಚಿಸತಕ್ಕದ್ದು ;

(2) ಕಾರ್ಯನಿರ್ವಾಹಕ ಸಮಿತಿಯು, ಪದನಿಮಿತ್ತ ಸದಸ್ಯರಾಗಿರುವ ಒಬ್ಬ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿಯೂ ಮತ್ತು ಪರಿಷತ್ತು ತನ್ನ ಸದಸ್ಯರ ಪೈಕಿಯಿಂದ ನಾಮನಿರ್ದೇಶನ ಮಾಡಿರುವ ಕನಿಷ್ಠ ಏಳಕ್ಕಿಂತ ಕಡಿಮೆ ಇಲ್ಲದಷ್ಟು ಆದರೆ ಹತ್ತು ಸದಸ್ಯರಿಗಿಂತ ಹೆಚ್ಚಿಲ್ಲದಷ್ಟು ಸಂಖ್ಯೆಯ ಸದಸ್ಯರುಗಳನ್ನು ಹೊಂದಿರತಕ್ಕದ್ದು ;

(3) ಅಧ್ಯಕ್ಷನು ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು ;

(4) ಕಾರ್ಯನಿರ್ವಾಹಕ ಸಮಿತಿ ಅಥವಾ ಯಾವುದೇ ಇತರ ಸಮಿತಿಯು, ಈ ಅಧಿನಿಯಮದ ಮೂಲಕ ತನಗೆ ಪ್ರದತ್ತವಾದ ಅಧಿಕಾರಗಳು ಮತ್ತು ವಿಧಿಸಲಾದ ಕರ್ತವ್ಯಗಳ ಜೊತೆಗೆ, ಈ ಸಂಬಂಧವಾಗಿ ರಚಿಸಬಹುದಾದ ಯಾವುದೇ ವಿನಿಯಮಗಳ ಮೂಲಕ ಪರಿಷತ್ತು ತನಗೆ ಪ್ರದಾನ ಮಾಡಬಹುದಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**8. ಪರಿಷತ್ತಿನ ಸದಸ್ಯ ಕಾರ್ಯದರ್ಶಿ ಮತ್ತು ನೌಕರರು.**- (1) ಪರಿಷತ್ತಿನ ನಿರ್ದೇಶನಗಳ ಮೇರೆಗೆ, ನಿಯಮಿಸಬಹುದಾದಂಥ ಅಥವಾ ಅಧ್ಯಕ್ಷನು ಪ್ರತ್ಯಾಯೋಜಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು ಪರಿಷತ್ತಿನ ಸದಸ್ಯ ಕಾರ್ಯದರ್ಶಿಯನ್ನು ಕೇಂದ್ರ ಸರ್ಕಾರವು ನೇಮಕ ಮಾಡತಕ್ಕದ್ದು.

(2) ಪರಿಷತ್ತು, ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ ಪಡೆದು ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅವಶ್ಯವೆಂದು ಭಾವಿಸುವಂಥ ಅಧಿಕಾರಿಗಳು ಮತ್ತು ಇತರ ನೌಕರರನ್ನು ನಿಯೋಜಿಸತಕ್ಕದ್ದು.

(3) ಪರಿಷತ್ತು, ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ ಪಡೆದು, ಪರಿಷತ್ತಿನ ಅಧ್ಯಕ್ಷನಿಗೆ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳನ್ನು ನಿಗದಿಪಡಿಸತಕ್ಕದ್ದು ಮತ್ತು ಸದಸ್ಯ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ನೌಕರರ ಸೇವಾ ಷರತ್ತುಗಳನ್ನು ಸಹ ನಿರ್ಧರಿಸತಕ್ಕದ್ದು.

**9. ಪರಿಷತ್ತಿನಲ್ಲಿನ ಖಾಲಿಸ್ಥಾನಗಳು, ಕಾರ್ಯ, ಇತ್ಯಾದಿಗಳನ್ನು ಅಸಿಂಧುಗೊಳಿಸದಿರುವುದು.**- ಪರಿಷತ್ತಿನ ಅಥವಾ ಅದರ ಯಾವುದೇ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು, ಸಂದರ್ಭಾನುಸಾರ ಪರಿಷತ್ತಿನಲ್ಲಿ ಅಥವಾ ಅದರ ಸಮಿತಿಯಲ್ಲಿ ಯಾವುದೇ ಖಾಲಿಸ್ಥಾನವಿದೆಯೆಂಬ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿದೆಯೆಂಬ ಕಾರಣಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ.

**10. ಪುನರ್ವಸತಿ ಪರಿಷತ್ತಿನ ವಿಸರ್ಜನೆ ಮತ್ತು ಪುನರ್ವಸತಿ ಪರಿಷತ್ತಿನ ಹಕ್ಕುಗಳು, ಹೊಣೆಗಾರಿಕೆಗಳು ಹಾಗೂ ನೌಕರರನ್ನು ಪರಿಷತ್ತಿಗೆ ವರ್ಗಾಯಿಸುವುದು.**- (1) ಪರಿಷತ್ತು ರಚನೆಯಾದ ದಿನದಂದು ಮತ್ತು ಆ ದಿನಾಂಕದಿಂದ ಪುನರ್ವಸತಿ ಪರಿಷತ್ತು ವಿಸರ್ಜನೆಯಾಗತಕ್ಕದ್ದು ಮತ್ತು ಅಂಥ ವಿಸರ್ಜನೆಯ ತರುವಾಯ,-

(ಎ) ಪುನರ್ವಸತಿ ಪರಿಷತ್ತಿನ ಅಥವಾ ಅದಕ್ಕೆ ಸೇರಿದ ಎಲ್ಲ ಚರ ಮತ್ತು ಸ್ಥಿರ ಸ್ವತ್ತುಗಳು ಮತ್ತು ಆಸ್ತಿಗಳನ್ನು ಪರಿಷತ್ತಿನಲ್ಲಿ ನಿಹಿತಗೊಳಿಸತಕ್ಕದ್ದು;

(ಬಿ) ಪುನರ್ವಸತಿ ಪರಿಷತ್ತಿನ ಎಲ್ಲ ಹಕ್ಕುಗಳು ಮತ್ತು ಹೊಣೆಗಾರಿಕೆಗಳನ್ನು ಪರಿಷತ್ತಿಗೆ ವರ್ಗಾಯಿಸತಕ್ಕದ್ದು ಮತ್ತು ಅವು ಪರಿಷತ್ತಿನ ಹಕ್ಕುಗಳು ಮತ್ತು ಹೊಣೆಗಾರಿಕೆಗಳಾಗಿರತಕ್ಕದ್ದು;

(ಸಿ) (ಬಿ) ಖಂಡದ ಉಪಬಂಧಗಳಿಗೆ ಬಾಧಕವಾಗದಂತೆ, ಸದರಿ ಪುನರ್ವಸತಿ ಪರಿಷತ್ತಿನ ಉದ್ದೇಶಗಳಿಗಾಗಿ ಅಥವಾ ಅದರ ಸಂಬಂಧದಲ್ಲಿ, ಆ ದಿನಾಂಕದ ನಿಕಟಪೂರ್ವದಲ್ಲಿ ಪುನರ್ವಸತಿ ಪರಿಷತ್ತು ವಹಿಸಿದ್ದ ಅಥವಾ ಅದರ ಪರವಾಗಿ ವಹಿಸಲಾಗಿದ್ದ ಎಲ್ಲ ಹೊಣೆಗಾರಿಕೆಗಳು, ಮಾಡಿಕೊಳ್ಳಲಾಗಿದ್ದ ಎಲ್ಲ ಕರಾರುಗಳು ಮತ್ತು ಮಾಡಿಕೊಳ್ಳಲು ತೊಡಗಿದ್ದ ಎಲ್ಲ ವಿಷಯಗಳು, ಪರಿಷತ್ತಿನೊಂದಿಗೆ ಅಥವಾ ಅದರ ಪರವಾಗಿ ವಹಿಸಲಾಗಿದೆಯೆಂದು, ಮಾಡಿಕೊಳ್ಳಲಾಗಿದೆಯೆಂದು ಅಥವಾ ಮಾಡಿಕೊಳ್ಳಲು ತೊಡಗಿದೆಯೆಂದು ಭಾವಿಸತಕ್ಕದ್ದು;

(ಡಿ) ಪುನರ್ವಸತಿ ಪರಿಷತ್ತಿಗೆ ಆ ದಿನಾಂಕದ ನಿಕಟಪೂರ್ವದಲ್ಲಿ ಬರಬೇಕಾಗಿದ್ದ ಎಲ್ಲ ಬಾಕಿ ಹಣದ ಮೊತ್ತಗಳನ್ನು ಪರಿಷತ್ತಿಗೆ ಬರಬೇಕಾದ ಬಾಕಿಗಳೆಂದು ಭಾವಿಸತಕ್ಕದ್ದು ;

(ಇ) ಆ ದಿನಾಂಕದ ನಿಕಟಪೂರ್ವದಲ್ಲಿ ಪುನರ್ವಸತಿ ಪರಿಷತ್ತು ಹೂಡಿದ್ದ ಅಥವಾ ಅದರ ವಿರುದ್ಧ ಹೂಡಲಾಗಿದ್ದ ಅಥವಾ ಹೂಡಬಹುದಾದ ಎಲ್ಲ ದಾವೆ ಮತ್ತು ವ್ಯವಹರಣೆಗಳನ್ನು ಪರಿಷತ್ತು ಅಥವಾ ಅದರ ವಿರುದ್ಧ ಮುಂದುವರೆಸಬಹುದು ಅಥವಾ ಹೂಡಬಹುದು; ಮತ್ತು

(ಎಫ್) ಆ ದಿನಾಂಕದ ನಿಕಟಪೂರ್ವದಲ್ಲಿ ಪುನರ್ವಸತಿ ಪರಿಷತ್ತಿನ ಅಡಿಯಲ್ಲಿ ಯಾವುದೇ ಪದವನ್ನು ಧಾರಣ ಮಾಡಿರುವ ಪ್ರತಿಯೊಬ್ಬ ನೌಕರನು, ಸಂಭಾವನೆ, ರಜೆ, ಭವಿಷ್ಯನಿಧಿ, ನಿವೃತ್ತಿ ಮತ್ತು ಇತರ ಸೇವಾಂತ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಪರಿಷತ್ತು ರಚನೆಯಾಗಿರದಿದ್ದರೆ ಹೇಗೋಹಾಗೆ ಪರಿಷತ್ತಿನಲ್ಲಿ ಅದೇ ಅವಧಿಯವರೆಗೆ ಮತ್ತು ಅದೇ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಪದಧಾರಣ ಮಾಡತಕ್ಕದ್ದು ಮತ್ತು ಪರಿಷತ್ತಿನ ನೌಕರನಾಗಿದ್ದರೆ ಹೇಗೋ ಹಾಗೆ ಅಥವಾ ಅಂಥ ನೌಕರನು

ಅಂಥ ಅವಧಿಯೊಳಗೆ ಪರಿಷತ್ತಿನ ನೌಕರನಾಗಿರಲು ಇಚ್ಛಿಸದಿದ್ದರೆ ಆ ದಿನಾಂಕದಿಂದ ಆರು ತಿಂಗಳು ಮುಕ್ತಾಯವಾಗುವವರೆಗೆ ಆ ಪದದಲ್ಲಿ ಮುಂದುವರೆಯತಕ್ಕದ್ದು.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947 ರಲ್ಲಿ (1947ರ 14) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಈ ಪ್ರಕರಣದ ಮೇರೆಗೆ ಪರಿಷತ್ ತನ್ನ ನಿಯತ ಸೇವೆಯಲ್ಲಿ ಯಾರೇ ನೌಕರನನ್ನು ವಿಲೀನಗೊಳಿಸುವುದರಿಂದಾಗಿ, ನೌಕರನು ಆ ಅಧಿನಿಯಮ ಅಥವಾ ಇತರೆ ಕಾನೂನಿನ ಮೇರೆಗೆ ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗತಕ್ಕದ್ದಲ್ಲ ಮತ್ತು ಅಂಥ ಯಾವುದೇ ಕ್ಲೇಮನ್ನು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಪುರಸ್ಕರಿಸತಕ್ಕದ್ದಲ್ಲ.

**ವಿವರಣೆ.-** ಈ ಪ್ರಕರಣದಲ್ಲಿ "ಪುನರ್ವಸತಿ ಪರಿಷತ್ತು" ಎಂದರೆ, ಸೊಸೈಟಿಗಳ ನೋಂದಣಿ ಅಧಿನಿಯಮ, 1860ರ (1860ರ 21) ಮೇರೆಗೆ ರಚಿತವಾದ ಮತ್ತು ನೋಂದಾಯಿತವಾದ ಮತ್ತು ಪರಿಷತ್ತು ರಚನೆಯಾಗುವುದಕ್ಕೆ ನಿಕಟಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಒಂದು ಸೊಸೈಟಿ.

## ಅಧ್ಯಾಯ – III

## ಪರಿಷತ್ತಿನ ಪ್ರಕಾರ್ಯಗಳು

**11. ಪುನರ್ವಸತಿ ವೃತ್ತಿ ಪರಿಣತರಿಗೆ ಭಾರತದಲ್ಲಿನ ವಿಶ್ವವಿದ್ಯಾನಿಲಯ ಮುಂತಾದವು ನೀಡಿರುವ ವಿದ್ಯಾರ್ಹತೆಗಳ ಮನ್ನಣೆ.-** (1) ಭಾರತದಲ್ಲಿನ ಯಾವುದೇ ವಿಶ್ವವಿದ್ಯಾನಿಲಯ ಅಥವಾ ಅನುಸೂಚಿಯಲ್ಲಿ ಸೇರಿಸಲಾಗಿರುವ ಇತರ ಶಿಕ್ಷಣ ಸಂಸ್ಥೆಯು ನೀಡಿರುವ ವಿದ್ಯಾರ್ಹತೆಗಳು ಪುನರ್ವಸತಿ ವೃತ್ತಿ ಪರಿಣತರಿಗೆ ಮನ್ನಣೆ ಪಡೆದ ವಿದ್ಯಾರ್ಹತೆಗಳಾಗಿರತಕ್ಕದ್ದು.

(2) ಪುನರ್ವಸತಿ ವೃತ್ತಿ ಪರಿಣತರಿಗೆ ವಿದ್ಯಾರ್ಹತೆ ನೀಡುವ ಯಾವುದೇ ವಿಶ್ವವಿದ್ಯಾನಿಲಯ ಅಥವಾ ಇತರೆ ಶಿಕ್ಷಣ ಸಂಸ್ಥೆಯು ಅನುಸೂಚಿಯಲ್ಲಿ ಸೇರಿರದಿದ್ದರೆ ಅದು ಯಾವುದೇ ಅಂಥ ವಿದ್ಯಾರ್ಹತೆಗೆ ಮನ್ನಣೆ ಪಡೆಯಲು ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ಕೇಂದ್ರ ಸರ್ಕಾರವು ಪರಿಷತ್ತಿನೊಡನೆ ಸಮಾಲೋಚಿಸಿ, ಅನುಸೂಚಿಯಲ್ಲಿ ಅಂಥ ವಿದ್ಯಾರ್ಹತೆಯನ್ನು ಸೇರಿಸಲು ಅಧಿಸೂಚನೆಯ ಮೂಲಕ ಅದನ್ನು ತಿದ್ದುಪಡಿ ಮಾಡಬಹುದು ಮತ್ತು ಒಂದು ನಿರ್ದಿಷ್ಟಪಡಿಸಿದ ದಿನಾಂಕದ ತರುವಾಯ ಮನ್ನಣೆ ನೀಡಿದಾಗ ಮಾತ್ರವೇ, ಅಂಥ ವಿದ್ಯಾರ್ಹತೆಯ ಎದುರಿಗೆ ಅನುಸೂಚಿಯ ಕೊನೆಯ ಅಂಕಣದಲ್ಲಿ ಅದನ್ನು ನಮೂದು ಮಾಡತಕ್ಕದ್ದೆಂದು ಸಹ ಅಂಥ ಯಾವುದೇ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

**12. ಭಾರತದ ಹೊರಗಿನ ಶಿಕ್ಷಣ ಸಂಸ್ಥೆಗಳು ನೀಡಿರುವ ವಿದ್ಯಾರ್ಹತೆಗಳ ಮನ್ನಣೆ.-** ವಿದ್ಯಾರ್ಹತೆಗಳ ಮನ್ನಣೆಗಾಗಿ ಪರಸ್ಪರ ಕೊಳ್ಳು - ಕೊಡುಗೆಯ ಯೋಜನೆಯನ್ನು ಇತ್ಯರ್ಥಗೊಳಿಸುವುದಕ್ಕಾಗಿ ಭಾರತದ ಹೊರಗಿನ ಯಾವುದೇ ದೇಶದಲ್ಲಿರುವ ಪ್ರಾಧಿಕಾರದೊಂದಿಗೆ ಪರಿಷತ್ತು ಮಾತುಕತೆ ನಡೆಸಬಹುದು ಮತ್ತು ಯಾವುದೇ ಅಂಥ ಯೋಜನೆಯ ಅನುಸರಣೆಯಲ್ಲಿ ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಪರಿಷತ್ತು ಮನ್ನಣೆ ನೀಡಬೇಕೆಂದು ನಿರ್ಧರಿಸಿರುವ ಯಾವುದೇ ವಿದ್ಯಾರ್ಹತೆಯನ್ನು ಅನುಸೂಚಿಯಲ್ಲಿ ಸೇರಿಸಲು ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು ಮತ್ತು ನಿರ್ದಿಷ್ಟಪಡಿಸಲಾದ ಒಂದು ದಿನಾಂಕದ ತರುವಾಯ ನೀಡಿದಾಗ ಮಾತ್ರವೇ ಅದು ಮನ್ನಣೆ ಪಡೆದ ವಿದ್ಯಾರ್ಹತೆಯಾಗಿರುವುದೆಂದು ಘೋಷಿಸಿ ಅನುಸೂಚಿಯ ಕೊನೆ ಅಂಕಣದಲ್ಲಿ ಅದನ್ನು ನಮೂದು ಮಾಡತಕ್ಕದ್ದೆಂದು ಸಹ ಅಂಥ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

**13. ಅನುಸೂಚಿಯಲ್ಲಿ ಸೇರಿಸಿರುವ ವಿದ್ಯಾರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳು ರಿಜಿಸ್ಟರಿನಲ್ಲಿ ತಮ್ಮ ಹೆಸರುಗಳನ್ನು ಸೇರಿಸಲು ಹಕ್ಕುಗಳು.-** (1) ಈ ಅಧಿನಿಯಮದಲ್ಲಿ ಒಳಗೊಂಡಿರುವ ಇತರ ಉಪಬಂಧಗಳಿಗೊಳಪಟ್ಟು, ಅನುಸೂಚಿಯಲ್ಲಿ ಸೇರಿರುವ ಯಾವುದೇ ವಿದ್ಯಾರ್ಹತೆಯು, ರಿಜಿಸ್ಟರಿನಲ್ಲಿ ಹೆಸರುಗಳನ್ನು ಸೇರಿಸಲು ಸಾಕಷ್ಟು ಅರ್ಹತೆಯಾಗಿರತಕ್ಕದ್ದು.

(2) ಮನ್ನಣೆ ಪಡೆದ ವಿದ್ಯಾರ್ಹತೆಯನ್ನು ಹೊಂದಿರುವ ಮತ್ತು ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ಸೇರಿಸಿರುವ ಪುನರ್ವಸತಿ ವೃತ್ತಿ ಪರಿಣತನಲ್ಲದ ಯಾರೇ ವ್ಯಕ್ತಿಯು,-

(ಎ) ಪುನರ್ವಸತಿ ವೃತ್ತಿ ಪರಿಣತನ ಪದವನ್ನು ಅಥವಾ ಸರ್ಕಾರದಲ್ಲಿ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ನಿರ್ವಹಿಸಿಕೊಂಡು ಬರುತ್ತಿರುವ ಸಂಸ್ಥೆಯಲ್ಲಿ ಅಂಥ ಪದವನ್ನು (ಅದನ್ನು ಯಾವುದೇ ಪದನಾಮದಿಂದಾದರೂ ಕರೆಯಲಿ)

– ಧಾರಣಮಾಡತಕ್ಕದ್ದಲ್ಲ;

(ಬಿ) ಭಾರತದ ಯಾವುದೇ ಭಾಗದಲ್ಲಿ ಪುನರ್ವಸತಿ ವೃತ್ತಿ ಪರಿಣಿತನಾಗಿ ವೃತ್ತಿ ನಡೆಸತಕ್ಕದ್ದಲ್ಲ;

(ಸಿ) ಒಬ್ಬ ಪುನರ್ವಸತಿ ವೃತ್ತಿ ಪರಿಣಿತನು ಸಹಿ ಮಾಡಬೇಕೆಂದು ಅಥವಾ ಅಧಿಪ್ರಮಾಣೀಕರಿಸಬೇಕೆಂದು ಯಾವುದೇ ಕಾನೂನು ಅಗತ್ಯಪಡಿಸುವ ಯಾವುದೇ ಪ್ರಮಾಣಪತ್ರಕ್ಕೆ ಸಹಿ ಮಾಡಲು ಅಥವಾ ಅದನ್ನು ಅಧಿಪ್ರಮಾಣೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ ;

(ಡಿ) ಅಂಗವಿಕಲರಿಗೆ ಸಂಬಂಧಿಸಿದ ಯಾವುದೇ ವಿಷಯದ ಮೇಲೆ ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ 45ನೇ ಪ್ರಕರಣದ ಮೇರೆಗೆ ಒಬ್ಬ ತಜ್ಞನಾಗಿ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಸಾಕ್ಷ್ಯ ನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಪರಂತು, ಒಬ್ಬ ವ್ಯಕ್ತಿಯು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮನ್ನಣೆ ಪಡೆದ ಪುನರ್ವಸತಿ ವೃತ್ತಿಯ ವಿದ್ಯಾರ್ಹತೆ ಪಡೆದಿದ್ದರೆ ಅವನನ್ನು ಅಂಥ ಅಧಿನಿಯಮದ ಪ್ರಾರಂಭದಿಂದ ಆರು ತಿಂಗಳ ಅವಧಿಯವರೆಗೆ ಮತ್ತು ಅವನು ಆರು ತಿಂಗಳ ಸದರಿ ಅವಧಿಯೊಳಗಾಗಿ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ಸೇರಿಸಲು ಅರ್ಜಿ ಸಲ್ಲಿಸಿದ್ದರೆ, ಅಂಥ ಅರ್ಜಿಯು ವಿಲೆಯಾಗುವವರೆಗೆ ಪಟ್ಟಿಯಲ್ಲಿ ಸೇರಿಸಲಾದ ಪುನರ್ವಸತಿ ವೃತ್ತಿ ಪರಿಣತನೆಂದು ಭಾವಿಸತಕ್ಕದ್ದು.

(2ಎ) (2)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರದ ಅಥವಾ ಒಂದು ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಆಸ್ಪತ್ರೆಯಲ್ಲಿ ಅಥವಾ ಕಾರ್ಯಸಂಸ್ಥೆಯಲ್ಲಿ ಅಥವಾ ಕೇಂದ್ರ ಸರ್ಕಾರವು ಅಥವಾ ಒಂದು ರಾಜ್ಯ ಸರ್ಕಾರವು ಹಣ ಒದಗಿಸಿದ ಮತ್ತು ಕೇಂದ್ರ ಸರ್ಕಾರವು ಅಧಿಸೂಚಿಸಿದ ಯಾವುದೇ ಇತರ ನಿಕಾಯದಲ್ಲಿ ನಿಯೋಜಿತನಾಗಿರುವ ಅಥವಾ ಕೆಲಸ ಮಾಡುತ್ತಿರುವ ದೈಹಿಕ ಔಷಧ ಚಿಕಿತ್ಸೆ ಮತ್ತು ದೈಹಿಕ ಪುನರ್ವಸತಿ, ಮೂಳೆ ವೈದ್ಯ ಚಿಕಿತ್ಸೆ, ಕಿವಿ, ಮೂಗು ಅಥವಾ ಗಂಟಲಿನ (ಇಎನ್‌ಟಿ) ವೈದ್ಯ ಚಿಕಿತ್ಸೆ, ನೇತ್ರ ಶಾಸ್ತ್ರ ಅಥವಾ ಮನೋವೈದ್ಯ ಶಾಸ್ತ್ರದ ಕ್ಷೇತ್ರದಲ್ಲಿ ವೈದ್ಯನಾಗಿರುವ ಅಥವಾ ವೈದ್ಯ ಸಹಾಯಕನಾಗಿರುವ ಯಾರೇ ವ್ಯಕ್ತಿಯು, ಆ ಉಪಪ್ರಕರಣದ (ಎ) ಯಿಂದ (ಡಿ) ವರೆಗಿನ ಖಂಡಗಳಲ್ಲಿ ಉಲ್ಲೇಖಿಸಿದ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

(3) ಯಾರೇ ವ್ಯಕ್ತಿಯು (2)ನೇ ಉಪಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದಲ್ಲಿ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**14. ವ್ಯಾಸಂಗ ಪಠ್ಯಕ್ರಮ ಮತ್ತು ಪರೀಕ್ಷೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಅಗತ್ಯಪಡಿಸಲು ಅಧಿಕಾರ.–** ಮನ್ನಣೆ ಪಡೆದ ವಿದ್ಯಾರ್ಹತೆಯನ್ನು ನೀಡುವ ಭಾರತದ ಪ್ರತಿಯೊಂದು ವಿಶ್ವವಿದ್ಯಾನಿಲಯ ಅಥವಾ ಶಿಕ್ಷಣ ಸಂಸ್ಥೆಯು, ಅಂಥ ವಿದ್ಯಾರ್ಹತೆಯನ್ನು ಪಡೆಯುವ ಸಲುವಾಗಿ ನಡೆಸಬೇಕಾದ ವ್ಯಾಸಂಗ ಪಠ್ಯಕ್ರಮ ಮತ್ತು ತೆಗೆದುಕೊಳ್ಳಬೇಕಾದ ಪರೀಕ್ಷೆಯ ಬಗ್ಗೆ, ಅಂಥ ವ್ಯಾಸಂಗ ಪಠ್ಯಕ್ರಮ ಮತ್ತು ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕಾದ ವಯಸ್ಸು ಮತ್ತು ವಿದ್ಯಾರ್ಹತೆಯನ್ನು ಪ್ರದಾನ ಮಾಡಿರುವ ಬಗ್ಗೆ ಹಾಗೂ ಸಾಮಾನ್ಯವಾಗಿ ಅಂಥ ವಿದ್ಯಾರ್ಹತೆಯನ್ನು ಪಡೆಯಲು ಇರುವ ಅಗತ್ಯತೆಗಳ ಬಗ್ಗೆ ಪರಿಷತ್ತು, ಕಾಲಕಾಲಕ್ಕೆ ಅಗತ್ಯಪಡಿಸಬಹುದಾದ ಮಾಹಿತಿಯನ್ನು ಒದಗಿಸತಕ್ಕದ್ದು.

**15. ಪರೀಕ್ಷೆಗಳ ಪರಿಶೀಲಕರು.–** (1) ಪರಿಷತ್ತು, ಪುನರ್ವಸತಿ ವೃತ್ತಿ ಪರಿಣತರಾಗಿ ವೃತ್ತಿ ನಡೆಸಲು ಶಿಕ್ಷಣ ನೀಡುವ ವಿಶ್ವವಿದ್ಯಾನಿಲಯ ಅಥವಾ ಶಿಕ್ಷಣ ಸಂಸ್ಥೆಗಳನ್ನು ಪರಿಶೀಲಿಸಲು, ಅಥವಾ ಆ ವಿಶ್ವವಿದ್ಯಾನಿಲಯ ಅಥವಾ ಶಿಕ್ಷಣ ಸಂಸ್ಥೆಯು ನೀಡಿರುವ ವಿದ್ಯಾರ್ಹತೆಗಳನ್ನು ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆಗಳೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವ ಉದ್ದೇಶಕ್ಕಾಗಿ ಯಾವುದೇ ವಿಶ್ವವಿದ್ಯಾನಿಲಯ ಅಥವಾ ಶಿಕ್ಷಣ ಸಂಸ್ಥೆಗಳು ನಡೆಸುವ

ಯಾವುದೇ ಪರೀಕ್ಷೆಗಳಲ್ಲಿ ಉಪಸ್ಥಿತರಿರಲು ತಾನು ಅಗತ್ಯವೆಂದು ಭಾವಿಸುವಷ್ಟು ಸಂಖ್ಯೆಯ ಪರಿಶೀಲಕರನ್ನು ನೇಮಕ ಮಾಡತಕ್ಕದ್ದು ;

(2) (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪರಿಶೀಲಕರು ಯಾವುದೇ ತರಬೇತಿ ಅಥವಾ ಪರೀಕ್ಷೆಯನ್ನು ನಡೆಸುವ ಸಂಬಂಧದಲ್ಲಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ. ಆದರೆ, ಅಂಥ ಶಿಕ್ಷಣ ನೀಡುವುದಕ್ಕಾಗಿ ನಿಯಮಿಸಲಾದ ಸಿಬ್ಬಂದಿ, ಸಾಧನ ಸಾಮಗ್ರಿ, ಸ್ಥಳಾವಕಾಶ, ತರಬೇತಿ ಮತ್ತು ಇತರೆ ಸೌಲಭ್ಯಗಳೂ ಸೇರಿದಂತೆ ಶಿಕ್ಷಣದ ಗುಣಮಟ್ಟಗಳ ಪರ್ಯಾಪ್ತತೆಯ ಬಗ್ಗೆ ಅಥವಾ ತಾವು ಉಪಸ್ಥಿತರಿರುವ ಪ್ರತಿಯೊಂದು ಪರೀಕ್ಷೆಯ ಪರ್ಯಾಪ್ತತೆ ಬಗ್ಗೆ ಪರಿಷತ್ತಿಗೆ ವರದಿ ಮಾಡತಕ್ಕದ್ದು.

(3) ಪರಿಷತ್ತು, (2)ನೇ ಉಪಪ್ರಕರಣದ ಮೇರೆಗೆ ಪರಿಶೀಲಕರ ವರದಿಯ ಒಂದು ಪ್ರತಿಯನ್ನು ಸಂಬಂಧಪಟ್ಟ ವಿಶ್ವ ವಿದ್ಯಾನಿಲಯ ಅಥವಾ ಶಿಕ್ಷಣ ಸಂಸ್ಥೆಗೆ ಕಳುಹಿಸತಕ್ಕದ್ದು ಮತ್ತು ಅದರ ಮೇಲೆ ವಿಶ್ವವಿದ್ಯಾನಿಲಯ ಅಥವಾ ಶಿಕ್ಷಣ ಸಂಸ್ಥೆಯ ಷರಾದೊಂದಿಗೆ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೂ ಕಳುಹಿಸತಕ್ಕದ್ದು.

**16. ಪರೀಕ್ಷೆಗಳ ಸಂದರ್ಶಕರು.**- (1) ಪರಿಷತ್ತು, ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆಗಳನ್ನು ನೀಡುವ ಉದ್ದೇಶಕ್ಕಾಗಿ ಪುನರ್ವಸತಿ ಪರಿಣತರಿಗೆ ಶಿಕ್ಷಣ ನೀಡುತ್ತಿರುವ ಯಾವುದೇ ವಿಶ್ವವಿದ್ಯಾನಿಲಯ ಅಥವಾ ಶಿಕ್ಷಣ ಸಂಸ್ಥೆಯನ್ನು ಪರಿಶೀಲಿಸಲು ಅಥವಾ ಯಾವುದೇ ಪರೀಕ್ಷೆಗಳಲ್ಲಿ ಉಪಸ್ಥಿತರಿರಲು ಅಗತ್ಯವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಸಂದರ್ಶಕರನ್ನು ನೇಮಕ ಮಾಡಬಹುದು;

(2) ಯಾರೇ ವ್ಯಕ್ತಿಯನ್ನು, ಅವನು ಪರಿಷತ್ತಿನ ಸದಸ್ಯನಾಗಿರಲಿ ಅಥವಾ ಆಗಿಲ್ಲದಿರಲಿ, (1)ನೇ ಉಪಪ್ರಕರಣದ ಮೇರೆಗೆ ಸಂದರ್ಶಕನನ್ನಾಗಿ ನೇಮಕ ಮಾಡಬಹುದು, ಆದರೆ ಯಾವುದೇ ಪರಿಶೀಲನೆ ಅಥವಾ ಪರೀಕ್ಷೆಗಾಗಿ 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಒಬ್ಬ ಪರಿಶೀಲಕನನ್ನು ಅದೇ ಪರಿಶೀಲನೆ ಅಥವಾ ಪರೀಕ್ಷಾ ಕೇಂದ್ರಕ್ಕೆ ಸಂದರ್ಶಕನಾಗಿ ನೇಮಕ ಮಾಡತಕ್ಕದ್ದಲ್ಲ;

(3) ಸಂದರ್ಶಕನು ಯಾವುದೇ ತರಬೇತಿ ಅಥವಾ ಪರೀಕ್ಷೆ ಸಂಬಂಧದಲ್ಲಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ. ಆದರೆ, ಪುನರ್ವಸತಿ ವೃತ್ತಿ ಪರಿಣತರಿಗೆ ಶಿಕ್ಷಣ ನೀಡುವುದಕ್ಕಾಗಿ ನಿಯಮಿಸಲಾದ ಸಿಬ್ಬಂದಿ, ಸಾಧನ ಸಾಮಗ್ರಿ, ಸ್ಥಳಾವಕಾಶ, ತರಬೇತಿ ಮತ್ತು ಇತರ ಸೌಕರ್ಯಗಳೂ ಸೇರಿದಂತೆ ಶಿಕ್ಷಣ ಗುಣಮಟ್ಟದ ಪರ್ಯಾಪ್ತತೆಯ ಮೇಲೆ ಅಥವಾ ತಾವು ಉಪಸ್ಥಿತರಿರುವ ಪ್ರತಿಯೊಂದು ಪರೀಕ್ಷೆಯ ಪರ್ಯಾಪ್ತತೆಯ ಬಗ್ಗೆ ಅಧ್ಯಕ್ಷನಿಗೆ ವರದಿ ಮಾಡತಕ್ಕದ್ದು;

(4) ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಅಧ್ಯಕ್ಷನು ಅನ್ಯಥಾ ನಿರ್ದೇಶಿಸಿದ್ದ ಹೊರತು, ಸಂದರ್ಶಕನ ವರದಿಯನ್ನು ಗೌಪ್ಯವೆಂಬುದಾಗಿ ಭಾವಿಸತಕ್ಕದ್ದು :

ಪರಂತು, ಕೇಂದ್ರ ಸರ್ಕಾರವು ಸಂದರ್ಶಕನ ವರದಿಯ ಒಂದು ಪ್ರತಿಯನ್ನು ಕೇಳಿದರೆ, ಪರಿಷತ್ತು ಅದನ್ನು ಒದಗಿಸತಕ್ಕದ್ದು.

**17. ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು.**- (1) ಪರಿಶೀಲಕ ಅಥವಾ ಸಂದರ್ಶಕನು ವರದಿ ನೀಡಿದ ನಂತರ ಪರಿಷತ್ತಿಗೆ,-

(ಎ) ಯಾವುದೇ ವಿಶ್ವವಿದ್ಯಾನಿಲಯ ಅಥವಾ ಸಂಸ್ಥೆಯು ನಡೆಸುವ ಯಾವುದೇ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ತೆಗೆದುಕೊಳ್ಳಬೇಕಾದ ವ್ಯಾಸಂಗ ಪಠ್ಯಕ್ರಮ ಮತ್ತು ಪರೀಕ್ಷೆ ಅಥವಾ ಅಭ್ಯರ್ಥಿಗಳಿಂದ ಅಪೇಕ್ಷಿಸಲಾದ ಪ್ರಾವೀಣ್ಯತೆ; ಅಥವಾ

(ಬಿ) ಅಂಥ ವಿಶ್ವವಿದ್ಯಾನಿಲಯ ಅಥವಾ ಸಂಸ್ಥೆಯಲ್ಲಿ ಶಿಕ್ಷಣ ಮತ್ತು ತರಬೇತಿಗಾಗಿ ಒದಗಿಸಿದ ಸಿಬ್ಬಂದಿ, ಸಾಧನ ಸಾಮಗ್ರಿ, ಸ್ಥಳಾವಕಾಶ, ತರಬೇತಿ ಮತ್ತು ಇತರ ಸೌಲಭ್ಯಗಳು

- ಪರಿಷತ್ತು ನಿಯಮಿಸಿರುವ ಗುಣಮಟ್ಟಕ್ಕೆ ಅನುಗುಣವಾಗಿ ಇಲ್ಲವೆಂದು ಕಂಡುಬಂದರೆ, ಪರಿಷತ್ತು ಹಾಗೆಂದು ಕೇಂದ್ರ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸತಕ್ಕದ್ದು.

(2) ಅಂಥ ಮನವಿಯನ್ನು ಪರಿಗಣಿಸಿದ ತರುವಾಯ, ಕೇಂದ್ರ ಸರ್ಕಾರವು ಅದನ್ನು ಆ ವಿಶ್ವವಿದ್ಯಾನಿಲಯ ಅಥವಾ ಸಂಸ್ಥೆಗೆ, ಅಂಥ ವಿಶ್ವವಿದ್ಯಾನಿಲಯ ಅಥವಾ ಶಿಕ್ಷಣ ಸಂಸ್ಥೆಯು ಅದರ ವಿವರಣೆಯನ್ನು ಸರ್ಕಾರಕ್ಕೆ ಯಾವ ಅವಧಿಯೊಳಗೆ ಸಲ್ಲಿಸಬೇಕೆಂಬ ತಿಳಿವಳಿಕೆಯೊಂದಿಗೆ ಕಳುಹಿಸಬಹುದು.

(3) ವಿವರಣೆಯನ್ನು ಸ್ವೀಕರಿಸಿದ ಮೇಲೆ ಅಥವಾ ಆಗ ನಿಗದಿಪಡಿಸಿದ್ದ ಅವಧಿಯೊಳಗಾಗಿ ಯಾವುದೇ ವಿವರಣೆಯನ್ನು ಸಲ್ಲಿಸದಿರುವಲ್ಲಿ, ಆ ಅವಧಿಯು ಮುಕ್ತಾಯವಾದ ಮೇಲೆ, ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂಥ ಮತ್ತಷ್ಟು ವಿಚಾರಣೆ ಯಾವುದಾದರೂ ಇದ್ದರೆ, ಅದನ್ನು ಮಾಡಿದ ತರುವಾಯ, ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆಯನ್ನು ಒಂದು ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚಿತವಾಗಿ ನೀಡಲಾಗಿದ್ದರೆ ಮಾತ್ರ ಅದು ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆ ಆಗಿರತಕ್ಕದ್ದೆಂದು ಅಥವಾ ಸದರಿ ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆಯನ್ನು ಒಂದು ನಿರ್ದಿಷ್ಟಪಡಿಸಿದ ವಿಶ್ವವಿದ್ಯಾನಿಲಯ ಅಥವಾ ಸಂಸ್ಥೆಯ ವಿದ್ಯಾರ್ಥಿಗಳಿಗೆ ಒಂದು ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚಿತವಾಗಿ ನೀಡಲಾಗಿದ್ದರೆ ಮಾತ್ರ ಅದು ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆಯಾಗತಕ್ಕದ್ದೆಂದು ಅಥವಾ ಸಂದರ್ಭಾನುಸಾರ ಸದರಿ ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆಯನ್ನು, ಒಂದು ನಿರ್ದಿಷ್ಟಪಡಿಸಿದ ವಿಶ್ವವಿದ್ಯಾನಿಲಯ ಅಥವಾ ಸಂಸ್ಥೆಗೆ ಸಂಬಂಧಪಟ್ಟಂತೆ ಒಂದು ನಿರ್ದಿಷ್ಟಪಡಿಸಿದ ದಿನಾಂಕದ ತರುವಾಯ ನೀಡಿದಾಗ ಮಾತ್ರ ಅದು ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆಯಾಗಿರತಕ್ಕದ್ದೆಂದು ಘೋಷಿಸಿ ಅದನ್ನು ಸದರಿ ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆಯ ಎದುರು ಅನುಸೂಚಿಯಲ್ಲಿ ನಮೂದಿಸತಕ್ಕದ್ದೆಂದು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

**18. ಶಿಕ್ಷಣದ ಕನಿಷ್ಠ ಗುಣಮಟ್ಟಗಳು.-** ಪರಿಷತ್ತು ಭಾರತದ ವಿಶ್ವವಿದ್ಯಾನಿಲಯಗಳು ಅಥವಾ ಸಂಸ್ಥೆಗಳು ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆಯನ್ನು ನೀಡಲು ಅಗತ್ಯವಿರುವ ಶಿಕ್ಷಣದ ಕನಿಷ್ಠ ಗುಣಮಟ್ಟಗಳನ್ನು ನಿಯಮಿಸಬಹುದು.

**19. ರಿಜಿಸ್ಟರಿನಲ್ಲಿ ನೋಂದಣಿ.-** ಪರಿಷತ್ತಿನ ಸದಸ್ಯ ಕಾರ್ಯದರ್ಶಿಯು, ನಿಯಮಿಸಿದ ರೀತಿಯಲ್ಲಿ ಯಾರೇ ವ್ಯಕ್ತಿಯು ಅರ್ಜಿ ಸಲ್ಲಿಸಿದ ಮೇಲೆ ಅವನ ಹೆಸರನ್ನು ರಿಜಿಸ್ಟರಿನಲ್ಲಿ ನಮೂದಿಸಬಹುದು, ಪರಂತು, ಅಂಥ ವ್ಯಕ್ತಿಯು ಮಾನ್ಯತೆ ಪಡೆದ ಪುನರ್ವಸತಿ ವಿದ್ಯಾರ್ಹತೆಯನ್ನು ಹೊಂದಿದ್ದಾನೆಂದು ಸದಸ್ಯ ಕಾರ್ಯದರ್ಶಿಗೆ ಮನವರಿಕೆಯಾಗಬೇಕು:

ಪರಂತು, ಪರಿಷತ್ತು ಕಾರ್ಮಿಕ ಮಂತ್ರಾಲಯದ ಶಿಫಾರಸಿನ ಮೇಲೆ, ಆ ಮಂತ್ರಾಲಯದ ಅಧೀನದಲ್ಲಿನ ವೃತ್ತಿ ಪುನರ್ವಸತಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ವೃತ್ತಿ ಶಿಕ್ಷಕರು ಮತ್ತು ಇತರ ಸಿಬ್ಬಂದಿಯನ್ನು ನೋಂದಾಯಿಸಿಕೊಳ್ಳತಕ್ಕದ್ದು ಮತ್ತು ವೃತ್ತಿ ಪುನರ್ವಸತಿ ಕೇಂದ್ರಗಳನ್ನು ಮಾನವ ಶಕ್ತಿ ಅಭಿವೃದ್ಧಿ ಕೇಂದ್ರಗಳೆಂದು ಮನ್ನಣೆ ನೀಡತಕ್ಕದ್ದು:

ಮತ್ತೂ ಪರಂತು, ಪರಿಷತ್ತು, ಸಾಮಾಜಿಕ ನ್ಯಾಯ ಮತ್ತು ಸಶಕ್ತೀಕರಣ ಮಂತ್ರಾಲಯದ ಶಿಫಾರಸಿನ ಮೇಲೆ, ಆ ಮಂತ್ರಾಲಯದ ಅಧೀನದಲ್ಲಿನ ಅಂಗವಿಕಲರ ರಾಷ್ಟ್ರೀಯ ಸಂಸ್ಥೆಗಳಲ್ಲಿ ಮತ್ತು ಉಚ್ಚ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯನ್ನು ನೋಂದಾಯಿಸಿಕೊಳ್ಳತಕ್ಕದ್ದು ಮತ್ತು ಆ ಅಂಗವಿಕಲರ ರಾಷ್ಟ್ರೀಯ ಸಂಸ್ಥೆಗಳು ಮತ್ತು ಅಗ್ರ ಸಂಸ್ಥೆಗಳನ್ನು ಮಾನವ ಶಕ್ತಿ ಅಭಿವೃದ್ಧಿ ಕೇಂದ್ರಗಳೆಂದು ಮನ್ನಣೆ ನೀಡತಕ್ಕದ್ದು.

**20. ರಿಜಿಸ್ಟರಿನಲ್ಲಿ ನೋಂದಾಯಿತರಾದ ವ್ಯಕ್ತಿಗಳ ವಿಶೇಷಾಧಿಕಾರಗಳು.-** ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳು ಅಂಗವಿಕಲರ ಪುನರ್ವಸತಿ ಕಾರ್ಯಕ್ಷೇತ್ರದಲ್ಲಿ ನಿರತರಾಗಿರುವುದಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದಲ್ಲಿ ವಿಧಿಸಿರುವ ಷರತ್ತುಗಳು ಮತ್ತು ನಿರ್ಬಂಧಗಳಿಗೊಳಪಟ್ಟು, ರಿಜಿಸ್ಟರಿನಲ್ಲಿ ತತ್ಕಾಲದಲ್ಲಿ ಹೆಸರು ಇರುವ ಪ್ರತಿಯೊಬ್ಬ ವ್ಯಕ್ತಿಯು, ಭಾರತದ ಯಾವುದೇ ಭಾಗದಲ್ಲಿ ವೃತ್ತಿ ಪರಿಣತನಾಗಿ ವೃತ್ತಿ ನಡೆಸಲು ಮತ್ತು ಕಾನೂನಿನ ಯುಕ್ತ ಕ್ರಮದಲ್ಲಿ ಅಂಥ ವೃತ್ತಿಯ ಸಂಬಂಧದಲ್ಲಿ ಚಿಕಿತ್ಸೆಗಾಗಿ ಬಳಸುವ ಔಷಧಿಗಳಿಗೆ ಅಥವಾ ಸಲಕರಣೆಗಳಿಗೆ ತಗಲುವ ಯಾವುದೇ ವೆಚ್ಚಗಳು, ಚಾರ್ಜುಗಳು ಅಥವಾ ಅವನು ಹಕ್ಕುಳ್ಳವನಾಗಬಹುದಾದ ಯಾವುದೇ ಫೀಜು ಇವುಗಳನ್ನು ವಸೂಲು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು.

**21. ವೃತ್ತಿ ನಡತೆಯನ್ನು ನಿಯಮಿಸುವುದು ಮತ್ತು ರಿಜಿಸ್ಟರಿನಿಂದ ಹೆಸರು ತೆಗೆದುಹಾಕುವುದು.-** (1) ಪರಿಷತ್ತು ಪುನರ್ವಸತಿ ಪರಿಣತರಿಗೆ ವೃತ್ತಿ ನಡತೆ ಮತ್ತು ಶಿಷ್ಟಾಚಾರದ ಗುಣಮಟ್ಟಗಳನ್ನು ಮತ್ತು ನೀತಿ ಸಂಹಿತೆಯನ್ನು ನಿಯಮಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಪರಿಷತ್ತು ರಚಿಸಿದ ವಿನಿಯಮಗಳು, ಅವುಗಳ ಯಾವ ಉಲ್ಲಂಘನೆಯು ವೃತ್ತಿ ಗೌರವದ ಹೇಯ ನಡತೆ ಅಂದರೆ, ವೃತ್ತಿ ದುರ್ನಡತೆಯಾಗುತ್ತದೆ ಎಂಬುದನ್ನು ನಿರ್ದಿಷ್ಟಪಡಿಸಬಹುದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಇದ್ದರೂ ಅಂಥ ಉಪಬಂಧವು ಪರಿಣಾಮಕಾರಿಯಾಗಿರತಕ್ಕದ್ದು.

(3) ಯಾರೇ ವ್ಯಕ್ತಿಯು,–

(i) ಹೆಸರನ್ನು ರಿಜಿಸ್ಟರಿನಲ್ಲಿ ತಪ್ಪಿನಿಂದಾಗಿ ಅಥವಾ ತಪ್ಪು ನಿರೂಪಣೆಯಿಂದಾಗಿ ಅಥವಾ ಮುಖ್ಯ ಸಂಗತಿಯನ್ನು ಮುಚ್ಚಿಟ್ಟು ನಮೂದಿಸಲಾಗಿದೆಯೆಂದು;

(ii) ಯಾವುದೇ ಅಪರಾಧದ ಸಂಬಂಧದಲ್ಲಿ ಅವನು ಅಪರಾಧಿಯೆಂದು ನಿರ್ಣೀತನಾಗಿದ್ದಾನೆಂದು ಅಥವಾ ಯಾವುದೇ ವೃತ್ತಿ ಗೌರವದಲ್ಲಿ ಯಾವುದೇ ಹೇಯ ನಡತೆಯ ತಪ್ಪಿತಸ್ಥನಾಗಿದ್ದಾನೆಂದು ಅಥವಾ (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಲಾದ ವೃತ್ತಿನಡತೆ ಮತ್ತು ವೃತ್ತಿ ಗೌರವದ ಗುಣಮಟ್ಟಗಳನ್ನು ಅಥವಾ ನೀತಿ ಸಂಹಿತೆಯನ್ನು ಉಲ್ಲಂಘಿಸಿ, ಪರಿಷತ್ತಿನ ಅಭಿಪ್ರಾಯದಲ್ಲಿ ಅಂಥ ವ್ಯಕ್ತಿಯ ಹೆಸರನ್ನು ರಿಜಿಸ್ಟರಿನಲ್ಲಿ ಇಟ್ಟುಕೊಂಡು ಬರಲು ಅವನು ಅನರ್ಹನಾಗಿದ್ದಾನೆಂದು

– ಪರಿಷತ್ತಿಗೆ ಮನವರಿಕೆಯಾದರೆ, ಅದು ಅಂಥ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ ತರುವಾಯ ತಾನು ಸೂಕ್ತವೆಂದು ಭಾವಿಸಬಹುದಾದಂಥ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ನಡೆಸಿದ ತರುವಾಯ ಅಂಥ ವ್ಯಕ್ತಿಯ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕತಕ್ಕದ್ದೆಂದು ಆದೇಶಿಸಬಹುದು.

(4) ಯಾವ ವ್ಯಕ್ತಿಯ ಹೆಸರನ್ನು ರಿಜಿಸ್ಟರಿನಿಂದ ತೆಗೆಯಬೇಕೆಂದು ಆದೇಶಿಸಲಾಗಿದೆಯೋ ಆ ವ್ಯಕ್ತಿಯು ಖಾಯಂ ಆಗಿಯಾಗಲಿ ಅಥವಾ ನಿರ್ದಿಷ್ಟಪಡಿಸಬಹುದಾದಂಥ ವರ್ಷಗಳವರೆಗೆ ಆಗಲಿ ಈ ಅಧಿನಿಯಮದ ಮೇರೆಗೆ ನೋಂದಣಿಗಾಗಿ ಅನರ್ಹನಾಗತಕ್ಕದ್ದೆಂದು (3)ನೇ ಉಪಪ್ರಕರಣದ ಮೇರೆಗಿನ ಆದೇಶದ ಮೂಲಕ ನಿರ್ದೇಶಿಸಬಹುದು.

**22. ರಿಜಿಸ್ಟರಿನಿಂದ ಹೆಸರನ್ನು ತೆಗೆದುಹಾಕಿದ ಆದೇಶದ ವಿರುದ್ಧ ಅಪೀಲು.**– (1) ಅಗತ್ಯವಾದ ಪುನರ್ವಸತಿ ವಿದ್ಯಾರ್ಹತೆಗಳನ್ನು ಹೊಂದಿಲ್ಲವೆಂಬ ಕಾರಣವನ್ನು ಹೊರತುಪಡಿಸಿ, ಯಾವುದೇ ಕಾರಣದ ಮೇಲೆ ರಿಜಿಸ್ಟರಿನಿಂದ ಯಾರೇ ವ್ಯಕ್ತಿಯ ಹೆಸರನ್ನು ತೆಗೆದುಹಾಕಿರುವಲ್ಲಿ, ಅವನು ನಿಯಮಿಸಲಾದ ರೀತಿಯಲ್ಲಿ ಮತ್ತು ನಿಯಮಿಸಬಹುದಾದಂಥ ಫೀಜಿನ ಸಂದಾಯಕ್ಕೆ ಸಂಬಂಧಪಟ್ಟ ಷರತ್ತುಗಳೂ ಸೇರಿದಂತೆ ಅಂಥ ಷರತ್ತುಗಳಿಗೊಳಪಟ್ಟು, ಕೇಂದ್ರ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಅದರ ಮೇಲೆ ಕೇಂದ್ರ ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(2) 21ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗಿನ ಆದೇಶದ ದಿನಾಂಕದಿಂದ ಅರವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯ, (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಯಾವುದೇ ಅಪೀಲನ್ನು, ಅಂಗೀಕರಿಸತಕ್ಕದ್ದಲ್ಲ :

ಪರಂತು, ಅಪೀಲುದಾರನು ಸದರಿ ಅವಧಿಯೊಳಗಾಗಿ ಅಪೀಲು ಸಲ್ಲಿಸದಿರಲು ತನಗೆ ಸಾಕಷ್ಟು ಕಾರಣಗಳಿದ್ದವೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರೆ, ಸದರಿ ಅರವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಅಪೀಲನ್ನು ಅಂಗೀಕರಿಸಬಹುದು.

**23. ರಿಜಿಸ್ಟರು.**– (1) ಈ ಅಧಿನಿಯಮದ ಉಪಬಂಧಗಳ ಮತ್ತು ಪರಿಷತ್ತು ಮಾಡಿದ ಯಾವುದೇ ಆದೇಶದ ಅನುಸಾರವಾಗಿ ರಿಜಿಸ್ಟರನ್ನು ನಿರ್ವಹಿಸಿಕೊಂಡು ಬರುವುದು ಮತ್ತು ಅದನ್ನು ಕಾಲಕಾಲಕ್ಕೆ ಪರಿಷ್ಕರಿಸುವುದು ಮತ್ತು ರಾಜಪತ್ರದಲ್ಲಿ ಅದನ್ನು ಪ್ರಕಟಿಸುವುದು ಸದಸ್ಯ ಕಾರ್ಯದರ್ಶಿಯ ಕರ್ತವ್ಯವಾಗಿರತಕ್ಕದ್ದು.

(2) ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ ಅರ್ಥವ್ಯಾಪ್ತಿಯೊಳಗೆ ರಿಜಿಸ್ಟರನ್ನು ಸಾರ್ವಜನಿಕ ದಸ್ತಾವೇಜು ಎಂಬುದಾಗಿ ಭಾವಿಸತಕ್ಕದ್ದು ಮತ್ತು ಅದರ ಪ್ರತಿಯ ಮೂಲಕ ಅದನ್ನು ರುಜುವಾತು ಮಾಡಬಹುದು.

**24. ಪರಿಷತ್ತು ಒದಗಿಸಬೇಕಾದ ಮಾಹಿತಿ ಮತ್ತು ಅದರ ಪ್ರಕಟಣೆ.**– (1) ಪರಿಷತ್ತು, ಕೇಂದ್ರ ಸರ್ಕಾರವು ಅಗತ್ಯಪಡಿಸಬಹುದಾದಂಥ ವರದಿಗಳು, ತನ್ನ ನಡವಳಿಗಳ ಪ್ರತಿಗಳು, ತನ್ನ ಲೆಕ್ಕಪತ್ರಗಳ ಗೋಷ್ವಾರೆಗಳು ಮತ್ತು ಇತರೆ ಮಾಹಿತಿಗಳನ್ನು ಆ ಸರ್ಕಾರಕ್ಕೆ ಒದಗಿಸತಕ್ಕದ್ದು.

(2) ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಪರಿಷತ್ತು ತನಗೆ ಈ ಪ್ರಕರಣ ಅಥವಾ 16ನೇ ಪ್ರಕರಣದ ಮೇರೆಗೆ ಒದಗಿಸಿದ ಯಾವುದೇ ವರದಿ, ಪ್ರತಿ, ಗೋಷ್ವಾರೆ ಅಥವಾ ಇತರ ಮಾಹಿತಿಯನ್ನು ಪ್ರಕಟಿಸಬಹುದು.

**25. ಅಪರಾಧಗಳ ಸಂಜ್ಞಾನ.–** ದಂಡ ಪ್ರಕ್ರಿಯಾ ಸಂಹಿತೆ, 1973 ರಲ್ಲಿ (1974ರ 2) ಏನೇ ಇದ್ದರೂ, ಪರಿಷತ್‌ನಿಂದ ಈ ಬಗ್ಗೆ ಅಧಿಕೃತನಾದ ಯಾರೇ ವ್ಯಕ್ತಿಯು, ಲಿಖಿತದಲ್ಲಿ ನೀಡಿದ ದೂರಿನ ಮೇಲೆ ಅಲ್ಲದೆ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**26. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಕೇಂದ್ರ ಸರ್ಕಾರ, ಪರಿಷತ್, ಪರಿಷತ್ತಿನ ಅಧ್ಯಕ್ಷ, ಸದಸ್ಯರು, ಸದಸ್ಯ ಕಾರ್ಯದರ್ಶಿ ಅಥವಾ ಯಾರೇ ಅಧಿಕಾರಿ ಅಥವಾ ಇತರ ನೌಕರನು ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದಂಥ ಯಾವುದೇ ಕಾರ್ಯದ ಬಗ್ಗೆ ಅವನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**27. ಪರಿಷತ್ತಿನ ನೌಕರನು ಲೋಕನೌಕರನಾಗಿರುವುದು.–** ಪರಿಷತ್ತಿನ ಅಧ್ಯಕ್ಷ, ಸದಸ್ಯರು, ಸದಸ್ಯ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರೆ ನೌಕರರು ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮತ್ತು ವಿನಿಯಮದ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ನಿರ್ವಹಿಸುತ್ತಿರುವುದಾಗಿ ತಾತ್ಪರ್ಯವಾಗುವಾಗ ಅವರನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**28. ನಿಯಮ ರಚನಾಧಿಕಾರ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

**29. ವಿನಿಯಮಗಳ ರಚನಾಧಿಕಾರ.–** ಪರಿಷತ್ತು, ಕೇಂದ್ರ ಸರ್ಕಾರದ ಪೂರ್ವಮಂಜೂರಾತಿ ಪಡೆದು, ಸಾಮಾನ್ಯವಾಗಿ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು ಮತ್ತು ಪೂರ್ವೋಕ್ತ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳು ಕೆಳಕಂಡವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಪರಿಷತ್ತಿನ ಸ್ವತ್ತಿನ ವ್ಯವಸ್ಥಾಪನೆ;

(ಬಿ) ಪರಿಷತ್ತಿನ ಲೆಕ್ಕಪತ್ರಗಳ ನಿರ್ವಹಣೆ ಮತ್ತು ಪರಿಶೋಧನೆ;

(ಸಿ) ಪರಿಷತ್ತಿನ ಸದಸ್ಯರ ರಾಜೀನಾಮೆ;

(ಡಿ) ಅಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು;

(ಇ) 4ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಕಾರ್ಯಕಲಾಪಗಳನ್ನು ನಡೆಸುವ ಪ್ರಕ್ರಿಯಾ ನಿಯಮಗಳು;

(ಎಫ್) 7ನೇ ಪ್ರಕರಣದ ಮೇರೆಗೆ ರಚಿಸಲಾದ ಕಾರ್ಯನಿರ್ವಾಹಕ ಸಮಿತಿಯ ಮತ್ತು ಇತರ ಸಮಿತಿಗಳ ಪ್ರಕಾರ್ಯಗಳು;

(ಜಿ) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸದಸ್ಯ ಕಾರ್ಯದರ್ಶಿಯ ಅಧಿಕಾರಗಳು ಮತ್ತು ಕರ್ತವ್ಯಗಳು;

(ಹೆಚ್) ಪರಿಶೀಲಕರ ಮತ್ತು ಸಂದರ್ಶಕರ ವಿದ್ಯಾರ್ಹತೆಗಳು, ನೇಮಕಾತಿ, ಅಧಿಕಾರಗಳು ಮತ್ತು ಕರ್ತವ್ಯಗಳು ಹಾಗೂ ಅವರು ಅನುಸರಿಸಬೇಕಾದ ಕಾರ್ಯವಿಧಾನ;

(ಐ) ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆ ನೀಡಲು ಯಾವುದೇ ವಿಶ್ವವಿದ್ಯಾನಿಲಯ ಅಥವಾ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ, ಕೈಗೊಳ್ಳಬೇಕಾದ ವ್ಯಾಸಂಗ ಪಠ್ಯಕ್ರಮ ಮತ್ತು ಅಧ್ಯಯನ ಅಥವಾ ತರಬೇತಿ ಅವಧಿ, ಪರೀಕ್ಷಾ ವಿಷಯಗಳು ಮತ್ತು ಅದರಲ್ಲಿ ಪ್ರಾವೀಣ್ಯತೆ ಪಡೆಯಲು ಇರುವ ಗುಣಮಟ್ಟಗಳು;

(ಜೆ) ಪುನರ್ವಸತಿ ವೃತ್ತಿ ಪರಿಣತರ ಅಧ್ಯಯನ ಅಥವಾ ತರಬೇತಿಗಾಗಿನ ಸಿಬ್ಬಂದಿ, ಉಪಕರಣ, ಸ್ಥಳಾವಕಾಶ, ತರಬೇತಿಯ ಗುಣಮಟ್ಟಗಳು ಮತ್ತು ಇತರ ಸೌಲಭ್ಯಗಳು;

(ಕೆ) ಪರೀಕ್ಷೆಗಳನ್ನು ನಡೆಸುವುದು, ಪರೀಕ್ಷಕರ ವಿದ್ಯಾರ್ಹತೆಗಳು ಮತ್ತು ಅಂಥ ಪರೀಕ್ಷೆಗಳಿಗೆ ಪ್ರವೇಶದ ಷರತ್ತುಗಳು;

(ಎಲ್) 21ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪುನರ್ವಸತಿ ವೃತ್ತಿ ಪರಿಣತರು ಪಾಲಿಸಬೇಕಾದ ವೃತ್ತಿನಡತೆ ಮತ್ತು ಶಿಷ್ಟಾಚಾರಗಳು ಹಾಗೂ ನೀತಿ ಸಂಹಿತೆಯ ಗುಣಮಟ್ಟಗಳು;

(ಎಂ) ಈ ಅಧಿನಿಯಮದ ಮೇರೆಗೆ ನೋಂದಣಿಗಾಗಿ ಸಲ್ಲಿಸುವ ಅರ್ಜಿಯಲ್ಲಿ ತಿಳಿಸಬೇಕಾದ ವಿವರಗಳು ಮತ್ತು ವಿದ್ಯಾರ್ಹತೆಗಳ ರುಜುವಾತು;

(ಎನ್) 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಒಂದು ಅಪೀಲನ್ನು ಯಾವ ರೀತಿ ಮತ್ತು ಯಾವ ಷರತ್ತಿಗೊಳಪಟ್ಟು ಸಲ್ಲಿಸಬೇಕೆಂಬ ವಿಚಾರ;

(ಓ) ಈ ಅಧಿನಿಯಮದ ಮೇರೆಗೆ ಅರ್ಜಿಗಳಿಗೆ ಮತ್ತು ಅಪೀಲುಗಳಿಗೆ ಸಂದಾಯ ಮಾಡಬೇಕಾದ ಫೀಜುಗಳು;

(ಪಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**30. ನಿಯಮ ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.**- ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ವಿನಿಯಮವನ್ನು, ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಅದರ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮ ಅಥವಾ ವಿನಿಯಮ ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**ಅನುಸೂಚಿ**

(11ನೇ ಪ್ರಕರಣ ನೋಡಿ)

**ಭಾರತದ ವಿಶ್ವವಿದ್ಯಾನಿಲಯಗಳು ಅಥವಾ ಶಿಕ್ಷಣ ಸಂಸ್ಥೆಗಳು ನೀಡುವ ಮನ್ನಣೆ ಪಡೆದ ಪುನರ್ವಸತಿ ವಿದ್ಯಾರ್ಹತೆಗಳು**

| ವಿಶ್ವವಿದ್ಯಾನಿಲಯಗಳು ಶಿಕ್ಷಣ ಸಂಸ್ಥೆಗಳು | ವ್ಯಾಸಂಗ ಕ್ರಮದ ಹೆಸರು | ವಿದ್ಯಾರ್ಹತೆ | ಷರಾ |
|---|---|---|---|
| **1** | **2** | **3** | **4** |
| | **I. ಪುನರ್ವಸತಿ ಇಂಜಿನಿಯರ್‌ಗಳು / ತಂತ್ರಜ್ಞರು** | | |
| ರಾಷ್ಟ್ರೀಯ ಅಸ್ಥಿ ವಿಕಲತಾ ಸಂಸ್ಥೆ, ಬಿ.ಟಿ. ರಸ್ತೆ, ಬಾರ್ನ್ ಹೂಗ್ಲಿ, ಕಲ್ಕತ್ತಾ-700 090. | ಪ್ರೊಸ್ಥೆಟಿಕ್ ಮತ್ತು ಅರ್ಥೋಟಿಕ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ (2 ವರ್ಷಗಳು) | ಡಿಪ್ಲೊಮಾ | |
| ಪುನರ್ವಸತಿ ವಿಭಾಗ, ಸಫ್ದರ್‌ಜಂಗ್ ಆಸ್ಪತ್ರೆ, ನವದೆಹಲಿ. | ಪ್ರೊಸ್ಥೆಟಿಕ್ ಮತ್ತು ಅರ್ಥೋಟಿಕ್‌ನಲ್ಲಿ ವ್ಯಾಸಂಗ ಕ್ರಮ (3 ವರ್ಷಗಳು) | ಡಿಪ್ಲೊಮಾ | |
| ಸರ್ಕಾರಿ ಔಷಧ ಪುನರ್ವಸತಿ ಸಂಸ್ಥೆ, ಕೆ.ಕೆ. ನಗರ, ಮದ್ರಾಸ್-600 083. | ಅರ್ಥೋಟಿಕ್ ಮತ್ತು ಪ್ರೊಸ್ಥೆಟಿಕ್‌ನಲ್ಲಿ ಡಿಪ್ಲೊಮಾ | ಡಿಪ್ಲೊಮಾ | |
| ರಾಷ್ಟ್ರೀಯ ಪುನರ್ವಸತಿ ತರಬೇತಿ ಮತ್ತು ಸಂಶೋಧನಾ ಸಂಸ್ಥೆ, ಓಲತ್‌ಪುರ, ಅಂಚೆ: ಬೈರೋಯಿ ಜಿಲ್ಲೆ, ಕಟಕ್ (ಒರಿಸ್ಸಾ). | ಪ್ರೊಸ್ಥೆಟಿಕ್ ಮತ್ತು ಅರ್ಥೋಟಿಕ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ (2 ವರ್ಷಗಳು) | ಡಿಪ್ಲೊಮಾ | |
| ಅಖಿಲ ಭಾರತ ದೈಹಿಕ ಔಷಧ ಮತ್ತು ಪುನರ್ವಸತಿ ಸಂಸ್ಥೆ, ಹಾಜಿ ಅಲಿ, ಖಡೆ ಮಾರ್ಗ, ಮಹಾಲಕ್ಷ್ಮಿ, ಮುಂಬೈ-400 034. | ಬಿ.ಎಸ್.ಸಿ (ಪಿ ಮತ್ತು ಒ) | ಪದವಿ | |

| | | |
|---|---|---|
| ಪ್ರೊಸ್ಥೆಟಿಕ್ಸ್ ಮತ್ತು ಅರ್ಥೋಟಿಕ್ಸ್ ಶಾಲೆ, ಕೆ.ಕೆ. ನಗರ, ಮದ್ರಾಸ್‌–600 083. | ಪ್ರೊಸ್ಥೆಟಿಕ್ ಮತ್ತು ಅರ್ಥೋಟಿಕ್ ಇಂಜಿನಿಯರಿಂಗ್ ನಲ್ಲಿ ಡಿಪ್ಲೊಮಾ (2 ವರ್ಷಗಳ ಅವಧಿ) | ಡಿಪ್ಲೊಮಾ |
| ಶೀಫಲೀನ್ ಕುಷ್ಠರೋಗ ಸಂಶೋಧನೆ ಮತ್ತು ತರಬೇತಿ ಕೇಂದ್ರ, ಕರಿಗಿರಿ ಎಸ್‌ಎಲ್‌ಆರ್ ಸ್ಯಾನಿಟೋರಿಯಂ ಪಿ.ಓ. ಅಂಚೆ, ನಾರ್ತ್ ಅರ್ಕಾಟ್ ಜಿಲ್ಲೆ, (ದಕ್ಷಿಣ ಭಾರತ). | ಪ್ರಾಸ್ಥೆಟಿಕ್ ತಂತ್ರಜ್ಞರ ವ್ಯಾಸಂಗ ಕ್ರಮ, (18 ತಿಂಗಳು) | ಡಿಪ್ಲೊಮಾ |

## II. ಶ್ರವಣ ಶಾಸ್ತ್ರಜ್ಞರು ಮತ್ತು ವಾಕ್ ಚಿಕಿತ್ಸಕರು

| | | |
|---|---|---|
| ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–576 006. | ಬಿ.ಎಸ್.ಸಿ, ವಾಕ್ ಮತ್ತು ಶ್ರವಣ (3 ವರ್ಷಗಳ ಅವಧಿ) | ಪದವಿ |
| ಶ್ರವಣ ವಿಕಲರ ಅಲಿ ಯಾವರ್ ಜಂಗ್ ರಾಷ್ಟ್ರೀಯ ಸಂಸ್ಥೆ, ಬಾಂದ್ರಾ (ಪ), ಮುಂಬೈ–400 050. | ಬಿ.ಎಸ್.ಸಿ (ಎ ಮತ್ತು ಎಸ್‌ಟಿ) (3 ವರ್ಷಗಳ ಅವಧಿ) | ಪದವಿ |
| ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಯ ಸ್ನಾತಕೋತ್ತರ ಸಂಸ್ಥೆ ಚಂಡೀಗಢ–160 012. | ಬಿ.ಎಸ್.ಸಿ (ವಾಕ್ ಮತ್ತು ಶ್ರವಣ) (3 ವರ್ಷಗಳ ಅವಧಿ) | ಪದವಿ |
| ಟೋಪಿವಾಲಾ ರಾಷ್ಟ್ರೀಯ ವೈದ್ಯಕೀಯ ಕಾಲೇಜು ಮತ್ತು ಬಿವೈಎಲ್ ನಾಯರ್ ಚಾರಿಟೇಬಲ್ ಆಸ್ಪತ್ರೆ, ಡಾ: ಎ.ಎಲ್. ನಾಯರ್ ರಸ್ತೆ, ಮುಂಬೈ–400 008. | ಶ್ರವಣ ಶಾಸ್ತ್ರ ಮತ್ತು ವಾಕ್ ಚಿಕಿತ್ಸೆಯಲ್ಲಿ ಡಿಪ್ಲೊಮಾ (ಬಿ.ಎಸ್.ಸಿ) | ಡಿಪ್ಲೊಮಾ |
| ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಅನ್ಸಾರಿ ನಗರ, ನವದೆಹಲಿ. | ಬಿ.ಎಸ್‌ಸಿ (ಆನರ್ಸ್)ನಲ್ಲಿ ವಾಕ್ ಮತ್ತು ಶ್ರವಣ | ಪದವಿ |

## III. ಅಂಗವಿಕಲರ ವಿಶೇಷ ಶಾಲೆಗಳ ಮತ್ತು ಸಮಗ್ರ ಶಾಲೆಗಳ ಶಿಕ್ಷಕರು

| | | |
|---|---|---|
| ಶ್ರೀ ಕೆ.ಎಲ್. ಕಿವುಡರ ಸಂಸ್ಥೆ,<br>51, ವಿದ್ಯಾನಗರ,<br>ಭಾವಾನಗರ 364 002<br>ಗುಜರಾತ್ | ಕಿವುಡರ ಶಿಕ್ಷಕರ ತರಬೇತಿ<br>(1 ವರ್ಷದ ಅವಧಿ) | ಡಿಪ್ಲೊಮಾ |
| ಕಿವುಡರ ಶೈಕ್ಷಣಿಕ ಶ್ರವಣ ಶಾಸ್ತ್ರ<br>ಮತ್ತು ಸಂಶೋಧನಾ ಕೇಂದ್ರ<br>ಶಾಲೆ, "ಫೋನಂ"<br>67, ನೇಷಿಯನ್ ಸೀ ರಸ್ತೆ,<br>ಮುಂಬೈ –400 006. | ಕಿವುಡರ ಶಿಕ್ಷಕರ ಸರ್ಟಿಫಿಕೇಟ್<br>(10 ತಿಂಗಳ ಅವಧಿ) | ಸರ್ಟಿಫಿಕೇಟ್ |
| ವಿ.ಆರ್. ರುಯಾ ಮೂಕ<br>ಕಿವುಡರ ವಿದ್ಯಾಲಯ,<br>ಪುಣೆ–30. | ಕಿವುಡ ವಿದ್ಯಾರ್ಥಿಗಳ ಶಿಕ್ಷಕರ<br>ಡಿಪ್ಲೊಮಾ ತರಬೇತಿ<br>ವ್ಯಾಸಂಗ ಕ್ರಮ (1 ವರ್ಷ<br>ಅವಧಿ) | ಡಿಪ್ಲೊಮಾ |
| ಕಿವುಡರ ಲಿಟಲ್ ಫ್ಲವರ್<br>ಕಾನ್ವೆಂಟ್ ಹೈಯರ್ ಸೆಕೆಂಡರಿ<br>ಶಾಲೆ, 127, ಜಿ.ಎನ್. ರಸ್ತೆ, | (i) ಕಿವುಡರ ಶಿಕ್ಷಕ ತರಬೇತಿ<br>ಯಲ್ಲಿ ಜೂನಿಯರ್<br>ಡಿಪ್ಲೊಮಾ | ಡಿಪ್ಲೊಮಾ |
| ಕ್ಯಾಥೆಡ್ರಾಲ್ ಅಂಚೆ,<br>ಮದ್ರಾಸ್ 600 006. | (ii) ಕಿವುಡರ ಶಿಕ್ಷಕರ ತರಬೇತಿ<br>ಯಲ್ಲಿ ಸೀನಿಯರ್<br>ಡಿಪ್ಲೊಮಾ (10 ತಿಂಗಳ<br>ಅವಧಿ) | ಡಿಪ್ಲೊಮಾ |
| ದಿ ಬ್ಲೈಂಡ್ ರಿಲೀಫ್<br>ಅಸೋಸಿಯೇಷನ್,<br>ಲಾಲ್ ಬಹದ್ದೂರ್ ಶಾಸ್ತ್ರಿ ಮಾರ್ಗ,<br>ನವದೆಹಲಿ–110 003. | ಕುರುಡರ ಶಿಕ್ಷಕ ತರಬೇತಿಯ<br>ಒಂದು ವರ್ಷದ ವ್ಯಾಸಂಗ<br>ಕ್ರಮ | ಡಿಪ್ಲೊಮಾ |
| ಕಿವುಡರ ಕ್ಲಾರ್ಕ್ ಶಾಲೆ,<br>"ಸಾಧನ", ನಂ.3, | (i) ಕಿವುಡರ ಶಿಕ್ಷಕ ತರಬೇತಿ<br>ಡಿಪ್ಲೊಮಾ | ಡಿಪ್ಲೊಮಾ |
| 3ನೇ ಬೀದಿ,<br>ಡಾ: ರಾಧಾಕೃಷ್ಣನ್ ರಸ್ತೆ,<br>ಮೈಲಾಪುರ,<br>ಮದ್ರಾಸ್–600 004. | (ii) ಮನೋವಿಕಲರ<br>ಶಿಕ್ಷಕ ತರಬೇತಿ | ಡಿಪ್ಲೊಮಾ |

| | | |
|---|---|---|
| ರಾಮಕೃಷ್ಣ ಮಿಷನ್,<br>ಕುರುಡು ಬಾಲಕರ ಅಕಾಡಮಿ,<br>ಹರೇಂದ್ರ ಪುರ 743 508.<br>ಪಶ್ಚಿಮ ಬಂಗಾಳ. | (i) ದೃಷ್ಟಿ ವಿಕಲರ ಸೇವೆ ಯಲ್ಲಿನ ಪ್ರಾಥಮಿಕ ಹಂತದ ಶಿಕ್ಷಕರು (18 ತಿಂಗಳ ಅವಧಿ) | ಡಿಪ್ಲೊಮಾ |
| | (ii) ದೃಷ್ಟಿ ವಿಕಲರ ಸೇವೆ ಯಲ್ಲಿನ ಸೆಕೆಂಡರಿ ಹಂತದ ಶಿಕ್ಷಕರು (10 ತಿಂಗಳ ಅವಧಿ) | ಡಿಪ್ಲೊಮಾ |
| ಕುರುಡರ ಸರ್ಕಾರಿ ಹೈಯರ್<br>ಸೆಕೆಂಡರಿ ಸ್ಕೂಲ್,<br>ಪೂನಮಲ್ಲಿ,<br>ಮದ್ರಾಸ್-600 056 | (i) ಕುರುಡರ ಬೋಧನ ಡಿಪ್ಲೊಮಾ (6 ತಿಂಗಳು ಶಾಲೆಯಲ್ಲಿ, 12 ತಿಂಗಳ ಅಂಚೆ ತೆರಪಿನ ಮೂಲಕ ಶಿಕ್ಷಣ) | ಡಿಪ್ಲೊಮಾ |
| | (ii) ಕುರುಡರ ಬೋಧನದಲ್ಲಿ ವಿಶೇಷ ಪರೀಕ್ಷೆ (10 ತಿಂಗಳ ಕೋರ್ಸ್) | ಸರ್ಟಿಫಿಕೇಟ್ |
| ಶ್ರವಣ ವಿಕಲರಿಗಾಗಿ ಅಲಿ<br>ಯಾವರ್ ಜಂಗ್<br>ರಾಷ್ಟ್ರೀಯ ಸಂಸ್ಥೆ,<br>ಬಾಂದ್ರಾ (ಪ),<br>ಮುಂಬೈ-400 050 | (i) ಬಿ.ಎಡ್ (ಡೆಫ್) | ಸ್ನಾತಕೋತ್ತರ ಡಿಪ್ಲೊಮಾ |
| | (ii) ಪ್ರಾದೇಶಿಕ ಭಾಷೆಗಳಲ್ಲಿ ಡಿಪ್ಲೊಮಾ ಬಿ.ಎಡ್ (ಡೆಫ್) | ಡಿಪ್ಲೊಮಾ |

## IV. ವಿವಿಧೋದ್ದೇಶ ಪುನರ್ವಸತಿ ಚಿಕಿತ್ಸಕ ತಂತ್ರಜ್ಞರು/ ಸಹಾಯಕ/ ಕೆಲಸಗಾರ

| | | |
|---|---|---|
| ಪುನರ್ವಸತಿ ವಿಭಾಗ,<br>ಸಫ್ದರ್‌ಜಂಗ್ ಆಸ್ಪತ್ರೆ<br>ನವದೆಹಲಿ-110 029 | ಬಹು ಪುನರ್ವಸತಿ ಕೆಲಸ ಗಾರರ ಒಂದು ವರ್ಷದ ಸರ್ಟಿಫಿಕೇಟ್ ಕೋರ್ಸು | ಸರ್ಟಿಫಿಕೇಟ್ |

## V. ವೃತ್ತಿ ಸಲಹೆಗಾರರು

| | | |
|---|---|---|
| ರಾಷ್ಟ್ರೀಯ ಶಿಕ್ಷಣ,<br>ಸಂಶೋಧನೆ ಮತ್ತು ತರಬೇತಿ<br>ಪರಿಷತ್, ಶ್ರೀ ಅರಬಿಂದೋ ಮಾರ್ಗ,<br>ನವದೆಹಲಿ-110 016 | ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ದಲ್ಲಿ ಡಿಪ್ಲೊಮಾ ಕೋರ್ಸು (9 ತಿಂಗಳ ಅವಧಿ) | ಡಿಪ್ಲೊಮಾ |
| ಅಖಿಲ ಭಾರತ ದೈಹಿಕ<br>ಔಷಧಿ ಮತ್ತು ಪುನರ್ವಸತಿ<br>ಸಂಸ್ಥೆ, ಹಾಜಿ ಆಲಿ, ಖಡೆ<br>ಮಾರ್ಗ, ಮಹಾಲಕ್ಷ್ಮಿ<br>ಮುಂಬೈ-400 034. | ಪಿ.ಜಿ.ಡಿ.ಆರ್ (ವೃತ್ತಿ ಮಾರ್ಗದರ್ಶನ) | ಡಿಪ್ಲೊಮಾ |

## VI. ಸಂವಹನ ವ್ಯತ್ಯಯ ಡಿಪ್ಲೊಮಾ

| | | |
|---|---|---|
| ಶ್ರವಣ ವಿಕಲರ ಅಲಿ ಯಾವರ್ ಜಂಗ್ ರಾಷ್ಟ್ರೀಯ ಸಂಸ್ಥೆ, ಬಾಂದ್ರಾ (ಪ) ಮುಂಬೈ-400 050. | ಸಂವಹನ ವ್ಯತ್ಯಯ ಡಿಪ್ಲೊಮಾ (1 ವರ್ಷ) | ಡಿಪ್ಲೊಮಾ |

* * *